# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ    Kannada Daily

ಹಾಸನ    E-mail : kannadapostnews@gmail.com    / ಕನ್ನಡ post    Price: ₹1

Vol.No.01 | Issue. 140 | Pages. 2 | Date: 05-04-2025, SATURDAY    RNI NO: KARKAN/2024/89601

ಸಂಪುಟ : 01 - ಸಂಚಿಕೆ : 140 - ಪುಟಗಳು : 2 - 05 ಏಪ್ರಿಲ್ 2025 ಶನಿವಾರ    Ph: 8762954248    ದರ : ₹1


# ವೀರಶೈವ ಲಿಂಗಾಯತರಿಗೆ ಸಿಗದ ರಾಜಕೀಯ ಪ್ರಾತಿನಿಧ್ಯ

## ಸಮಾಜದ ಮುಖಂಡರ ಅಸಮಾಧಾನ : ವೀರಶೈವ-ಲಿಂಗಾಯತ ಮಹಾಸಭಾ ಜಿಲ್ಲಾ ಕಾರ್ಯಾಲಯ ಉದ್ಘಾಟನೆ ಸಮಾರಂಭ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ದಕ್ಷಿಣ ಭಾರತದ ನಾಲ್ಕು ರಾಜ್ಯಗಳ ವ್ಯಾಪ್ತಿಯಲ್ಲಿ ಬಹುಸಂಖ್ಯಾತರಾಗಿರುವ ವೀರಶೈವ-ಲಿಂಗಾಯತ ಸಮುದಾಯಕ್ಕೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳಲ್ಲಿ ಸಮರ್ಪಕ ಪ್ರಾತಿನಿಧ್ಯ, ಅಧಿಕಾರ ದೊರೆಯುತ್ತಿಲ್ಲ ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಜ್ಯ ಪ್ರಧಾನ ಕಾರ್ಯದರ್ಶಿ ಸಾದರನಹಳ್ಳಿ ನಟರಾಜ್ ಅಸಮಾಧಾನ ವ್ಯಕ್ತಪಡಿಸಿದರು.

ನಗರದ ತಣ್ಣೀರುಹಳ್ಳ ಮಠದ ಸಭಾಂಗಣದಲ್ಲಿ ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾ ಜಿಲ್ಲಾ ನೂತನ ಕಚೇರಿ ಲೋಕಾರ್ಪಣೆ ಸಮಾರಂಭ ಉದ್ಘಾಟಿಸಿ ಮಾತನಾಡಿದರು.



ಬಹುಸಂಖ್ಯಾತ ವೀರಶೈವ-ಲಿಂಗಾಯತ ಸಮಾಜ ರಾಜಕೀಯ ಸ್ಥಾನಮಾನದಿಂದ ವಂಚಿತವಾಗುತ್ತಿದೆ.

ಇದಕ್ಕೆ ನಮ್ಮಲ್ಲಿ ಸಂಘಟನೆ ಇಲ್ಲದಿರುವುದೇ ಕಾರಣವಾಗಿದೆ. ಈ ಕೊರತೆ ನೀಗಲು ಮಹಾಸಭಾದ ರಾಜ್ಯಾಧ್ಯಕ್ಷ ಶಂಕರ್ ಬಿದರಿ ಅವರು ಸಮುದಾಯದ ಪ್ರತಿ ಮನೆ ಮನೆಯಲ್ಲೂ ಮಹಾಸಭಾ ಸದಸ್ಯತ್ವ ಹೊಂದುವಂತೆ ಮಾಡಬೇಕು ಎನ್ನುವ ಗುರಿ ಹೊಂದಿದ್ದಾರೆ.

ಹಾಸನ ಜಿಲ್ಲೆಯಲ್ಲಿ ಸಮುದಾಯ ನಾಲ್ಕು ಲಕ್ಷ ಜನಸಂಖ್ಯೆ ಹೊಂದಿದೆ. ಆದರೆ ಮಹಾಸಭಾ ಸದಸ್ಯರ ಸಂಖ್ಯೆ ಕೇವಲ 8466 ಮಾತ್ರವೇ ಇದೆ. 2026ರ ವೇಳೆಗೆ ಪ್ರತಿ ತಾಲೂಕಿನಲ್ಲಿಯೂ ಕನಿಷ್ಠ 10 ಸಾವಿರ ಸದಸ್ಯರನ್ನು ನೋಂದಣಿ ಮಾಡಿಸಬೇಕು. ಈ ಬಗ್ಗೆ ತಾಲ್ಲೂಕು ಘಟಕಗಳ ಅಧ್ಯಕ್ಷರು ಕಾರ್ಯಪ್ರವೃತ್ತರಾಗಬೇಕು. ಸಂಘಟನೆಗೆ ಒತ್ತು ನೀಡುವ ದಿಸೆಯಲ್ಲಿ ಪ್ರತಿ ತಾಲ್ಲೂಕು ಕೇಂದ್ರದಲ್ಲಿ ಈ ಬಾರಿ ಬಸವ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಬೇಕು ಎಂದರು.

> ಜಿಲ್ಲೆಯಲ್ಲಿ ವೀರಶೈವ-ಲಿಂಗಾಯತ ಸಮಾಜಕ್ಕೆ ರಾಜಕೀಯ ಸ್ಥಾನಮಾನ ದಿನದಿಂದ ದಿನಕ್ಕೆ ದೂರವಾಗುತ್ತಿದೆ. ಜಿಲ್ಲೆಯ ಎಲ್ಲಾ ಸ್ವಾಮೀಜಿಗಳು ಸಮಾಜದ ಮುಖಂಡರ ಸಮ್ಮುಖದಲ್ಲಿ ಬೃಹತ್ ಸಮಾವೇಶ ಆಯೋಜಿಸಿ ಸ್ಪಷ್ಟ ಸಂದೇಶ ನೀಡಬೇಕು. ಇಲ್ಲವಾದರೆ ನಮಗೆ ಯಾವುದೇ ಸ್ಥಾನ ಮಾನ ಸಿಗುವುದಿಲ್ಲ, ಇನ್ನು ಮುಂದಾದರೂ ರಾಜಕೀಯ ಸ್ಥಾನಮಾನ ಕಿತ್ತುಕೊಳ್ಳಬೇಕು.
>
> **- ಎನ್.ಆರ್. ಸಂತೋಷ್, ಮುಖಂಡ**

ರಾಜ್ಯ ಸರ್ಕಾರ ಇತ್ತೀಚಿನ ದಿನಗಳಲ್ಲಿ ವೀರಶೈವ-ಲಿಂಗಾಯತ ಸಮಾಜವನ್ನು ರಾಜಕೀಯವಾಗಿ ಮುಗಿಸುವ ಉದ್ದೇಶದಿಂದ ಜಾತಿ ಗಣತಿಯನ್ನು ಮುಂದಿಟ್ಟುಕೊಂಡು ರಾಜಕೀಯ ಮಾಡುತ್ತಿದೆ ಎಂದು ಆರೋಪಿಸಿದರು.

ಸಮುದಾಯದ ಎಲ್ಲರೂ ಸಂಘಟನೆಗೆ ಒತ್ತು ನೀಡಿದರೆ ಮಾತ್ರ ಇಂತಹ ದುಷ್ಟ ಯತ್ನಗಳಿಂದ ಸಮಾಜವನ್ನು ಕಾಪಾಡಬಹುದು ಎಂದರು.

ಜಿಲ್ಲಾ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ನವಿಲೆ ಪರಮೇಶ್ ಮಾತನಾಡಿ, ಜಿಲ್ಲೆಯಲ್ಲಿ ಮಹಾಸಭಾ ತನ್ನ ಛಾಪು ಮೂಡಿಸುವ ಜತೆಗೆ ಸಂಘಟನೆ ಒತ್ತು ನೀಡುತ್ತಾ ಬಂದಿದೆ. ಇಡೀ ಜಿಲ್ಲೆಯ ಎಲ್ಲ ನಾಲ್ಕು ಲಕ್ಷ ಸಮಾಜ ಬಾಂಧವರು ಸದಸ್ಯತ್ವ ನೋಂದಣಿ ಮಾಡಿಕೊಂಡರೆ ಮಾತ್ರ ನಮ್ಮ ಹಕ್ಕುಗಳನ್ನು ಪಡೆಯಲು ಸಾಧ್ಯವಾಗುತ್ತದೆ ಎಂದರು.

# ಕಾಂಗ್ರೆಸ್ ಒಳಜಗಳ: ಕಾರ್ಯಕರ್ತರ ಅಸಮಾಧಾನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಪುರಸಭೆ ಆಡಳಿತದಲ್ಲಿನ ಕಾಂಗ್ರೆಸ್ ಸದಸ್ಯರ ಆಂತರಿಕ ಕಚ್ಚಾಟ ಪಕ್ಷದಲ್ಲಿ ಎಲ್ಲವೂ ಸರಿಯಿಲ್ಲ ಎಂಬುದನ್ನು ನಿತ್ಯ ಬಹಿರಂಗಗೊಳಿಸುತ್ತಿದೆ. ಅದರಿಂದ ಪಕ್ಷದ ಕಾರ್ಯಕರ್ತರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಜಿಲ್ಲೆಯ ಏಳು ವಿಧಾನಸಭೆ ಕ್ಷೇತ್ರಗಳ ಪೈಕಿ ಅರಸೀಕೆರೆಯಲ್ಲಿ ಪಕ್ಷದ ಶಾಸಕರಿದ್ದು 2028ರ ಚುನಾವಣೆಯಲ್ಲಿ ಬೇಲೂರು ಕ್ಷೇತ್ರವನ್ನು ಕಾಂಗ್ರೆಸ್ ತೆಕ್ಕೆಗೆ ತೆಗೆದುಕೊಳ್ಳುವ ವಿಶ್ವಾಸದಲ್ಲಿ ವರಿಷ್ಠರಿದ್ದಾರೆ. ಆದರೆ ಇಲ್ಲಿನ ವಾಸ್ತವ ಪರಿಸ್ಥಿತಿ ಬೇರೆಯೇ ಇದೆ. ಸದ್ಯ ತಾಲ್ಲೂಕು ಕಾಂಗ್ರೆಸ್ ಮನೆಯೊಂದು ನಾಲ್ಕು ಬಾಗಿಲು ಎನ್ನುವಂತಾಗಿದೆ.

ಪುರಸಭೆಯಲ್ಲಿ 17 ಸ್ಥಾನ ಗೆಲ್ಲುವ ಮೂಲಕ ಕಾಂಗ್ರೆಸ್ ಅಧಿಕಾರ ಗಿಟ್ಟಿಸಿಕೊಂಡಿದೆ. ಆದರೆ ಸ್ವಪಕ್ಷೀಯರ ಕಿತ್ತಾಟ ದಿನದಿಂದ ದಿನಕ್ಕೆ ಮಹತ್ವದ ತಿರುವು ಪಡೆದುಕೊಳ್ಳುತ್ತಿವೆ. ಈ ಬೆಳವಣಿಗೆ ವಿಪಕ್ಷಗಳಿಗೆ ಮನರಂಜನೆ ನೀಡುತ್ತಿದೆ.



2023ರ ಚುನಾವಣೆಯಲ್ಲೂ ಕಾಂಗ್ರೆಸ್ ಒಳ ಬೇಗುದಿಯಿಂದಲೇ ವಿಧಾನಸಭಾ ಚುನಾವಣೆಯಲ್ಲಿ ಕಮಲ ಅರಳಿಸಲು ಸಹಕಾರವಾಯಿತು ಎನ್ನುವುದು ಬಹಿರಂಗ ಸತ್ಯ. ಏನಾದರೂ ಸರಿ ಮುಂದಿನ ವಿಧಾನಸಭೆಯನ್ನು ಶತಾಯಗತಾಯ ಗೆಲ್ಲಬೇಕು ಎಂದು ಮಾಜಿ ಸಚಿವ ಬಿ. ಶಿವರಾಂ ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ ಕ್ಷೇತ್ರದಲ್ಲಿ ಸಂಚಾರ ನಡೆಸುತ್ತಿದ್ದಾರೆ. ವಿಧಾನಸಭಾ ಚುನಾವಣೆಗೆ ದಿಕ್ಸೂಚಿ ನೀಡಿದ ಪುರಸಭೆಯಲ್ಲಿನ ಕಾಂಗ್ರೆಸ್ ಸದಸ್ಯರೇ ಕಿತ್ತಾಟದಿಂದ ದಿನದಿಂದ ದಿನಕ್ಕೆ ತಾರಕಕ್ಕೆ ಏರುತ್ತಿದ್ದು ವಿಪಕ್ಷಗಳು ಅದರ ಲಾಭವನ್ನು ಚೆನ್ನಾಗಿ ಪಡೆಯುತ್ತಿವೆ.

> ಬೇಲೂರು ಕ್ಷೇತ್ರದಲ್ಲಿ ಪಕ್ಷ ಸುಭದ್ರವಾಗಿದೆ. ಪುರಸಭೆಯಲ್ಲಿ ಕೆಲವರು ಅಧ್ಯಕ್ಷ ಸ್ಥಾನ ಪಡೆಯುವ ಆಸೆಯಿಂದ ಸಮಸ್ಯೆ ಸೃಷ್ಟಿಸುತ್ತಿದ್ದಾರೆ. ಯಾವುದೇ ಬಣ ರಾಜಕೀಯ ಕಾಂಗ್ರೆಸ್‌ನಲ್ಲಿ ಇಲ್ಲ. ಪುರಸಭೆಯ ಘಟನಾವಳಿಗಳನ್ನು ಹೈಕಮಾಂಡ್ ಗಮನಕ್ಕೆ ತರಲಾಗಿದೆ.
>
> **- ಎಂ.ಜಿ. ನಿಶಾಂತ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ**

ಪುರಸಭೆಯಲ್ಲಿ ತೀರ್ಥಕುಮಾರಿ ವೆಂಕಟೇಶ್ ಅಧ್ಯಕ್ಷರಾದ ಬಳಿಕ ಸ್ವಲ್ಪ ಮಟ್ಟಿನ ಸದಸ್ಯರ ಭಿನ್ನಮತ ಎ.ಆರ್. ಅಶೋಕ್ ಅಧ್ಯಕ್ಷರಾದ ಬಳಿಕ ಸ್ಫೋಟವಾಗಿದೆ. ಸಭೆ-ಸಮಾರಂಭಗಳಿಗೆ ಸ್ವಪಕ್ಷಿಯರೇ ಗೈರಾಗುವುದು ಕಾಂಗ್ರೆಸ್ ನಾಯಕರ ಗಮನಕ್ಕೂ ಬಂದಿದೆ. ಹೀಗಾಗಿ ಪುರಸಭೆ ಅಧ್ಯಕ್ಷ ಎ.ಆರ್. ಅಶೋಕ್ ಅವರು ಬಿಜೆಪಿ-ಜೆಡಿಎಸ್ ಸದಸ್ಯರ ಬೆಂಬಲದೊಂದಿಗೆ ಅಧಿಕಾರ ನಡೆಸುವಂತಾಗಿದೆ.

# ಸಚಿವರ ಕಚೇರಿಗೆ ಸಂಸದರ ಮ್ಯಾರಥಾನ್

## ನಾಲ್ವರು ಸಚಿವರಿಗೆ ಪ್ರತ್ಯೇಕ ಮನವಿ ಸಲ್ಲಿಸಿದ ಸಂಸದ

## ಶ್ರವಣಬೆಳಗೊಳ, ಬೇಲೂರು ದೇಗುಲಕ್ಕೆ ರಕ್ಷಣೆ ನೀಡಲು ಮನವಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ಸಂಸತ್ ಅಧಿವೇಶನ ಹಿನ್ನೆಲೆಯಲ್ಲಿ ನವದೆಹಲಿ ಪ್ರವಾಸದಲ್ಲಿದ್ದ ಸಂಸದ ಶ್ರೇಯಸ್ ಪಟೇಲ್ ಅವರು ವಿವಿಧ ಇಲಾಖೆ ಸಚಿವರನ್ನು ಭೇಟಿಯಾಗಿ ಜಿಲ್ಲೆಯ ಅಭಿವೃದ್ಧಿ ಕುರಿತು ಮನವಿ ಸಲ್ಲಿಸಿದರು.

ಮುಖ್ಯವಾಗಿ ಕಾಡಾನೆ ಮಾನವ ಸಂಘರ್ಷ ತಡೆಗಾಗಿ ಆನೆ ಕಾರಿಡಾರ್ ನಿರ್ಮಾಣ ಮಾಡಬೇಕೆಂದು ಅರಣ್ಯ ಸಚಿವ ಭೂಪೇಂದ್ರ ಯಾದವ್ ಅವರ ಗಮನಕ್ಕೆ ತಂದರು. ರಸ್ತೆ ಸಾರಿಗೆ ಹಾಗೂ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರನ್ನು ಭೇಟಿಯಾಗಿ ಜಿಲ್ಲೆ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿ 75 ಮತ್ತು 69ರ ಕಾಮಗಾರಿ ಪೂರ್ಣಗೊಳಿಸಬೇಕು. ಮೇಲ್ಸೇತುವೆ ಕಾಮಗಾರಿಗಳನ್ನು ಆದ್ಯತೆಯಾಗಿ ಪರಿಗಣಿಸಿ ಶೀಘ್ರ ಪೂರ್ಣಗೊಳಿಸುವಂತೆ ಕೋರಿದರು. ರೈಲ್ವೆ ಇಲಾಖೆ ಸಚಿವ ಅಶ್ವಿನಿ ವೈಷ್ಣವ್ ಅವರನ್ನು ಭೇಟಿಯಾಗಿ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ರೈಲು ನಿಲ್ದಾಣಗಳಿಗೆ ಮೂಲಸೌಕರ್ಯ ಕಲ್ಪಿಸುವಂತೆ ಕೋರಿದರು. ರೈಲು ನಿಲ್ದಾಣಗಳಲ್ಲಿ ಪ್ರಯಾಣಿಕರು ಹಾಗೂ ಸಿಬ್ಬಂದಿ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಸಚಿವರ ಗಮನಕ್ಕೆ ತರಲಾಯಿತು. ಜೊತೆಗೆ ರೈಲು ಸಂಚಾರ ಪ್ರಾರಂಭಿಸುವಂತೆ ಕೋರಲಾಯಿತು. ಜೊತೆಗೆ ಪ್ರವಾಸೋದ್ಯಮ ಸಚಿವ ಶೇಖಾವತ್ ಸಿಂಗ್ ಅವರನ್ನು ಸಹ ಭೇಟಿಯಾಗಿದ್ದಾರೆ.

## ಆನೆ ಕಾರಿಡಾರ್‌ಗೆ ಮನವಿ

ಜಿಲ್ಲೆಯ ಮಲೆನಾಡು ಭಾಗದ ಜನರು ಎದುರಿಸುತ್ತಿರುವ ಸಮಸ್ಯೆಗಳಲ್ಲಿ ಕಾಡಾನೆ ಹಾವಳಿ ಪ್ರಮುಖವಾಗಿದೆ. ಕಾಡಾನೆಗಳ ಸಂತತಿ ದಿನದಿಂದ ದಿನಕ್ಕೆ ಹೆಚ್ಚುತ್ತಿರುವುದರಿಂದ ಕಾಡಾನೆ-ಮಾನವ ಸಂಘರ್ಷ ಜಟಿಲವಾಗುತ್ತಿದೆ. ಆ ಹಿನ್ನೆಲೆಯಲ್ಲಿ ಸಮಸ್ಯೆಗೆ ಶಾಶ್ವತ ಪರಿಹಾರ ಕ್ರಮ ಕೈಗೊಳ್ಳುವಂತೆ ಮನವಿ ಸಲ್ಲಿಸಿದ್ದಾರೆ.

ಈ ಸಮಸ್ಯೆ ನಿವಾರಣೆಗೆ ಹೆತ್ತೂರು ಭಾಗದ ಎಂಟು ಗ್ರಾಮಗಳ 412 ರೈತರು ಒಟ್ಟು 2261.21 ಎಕರೆ ಭೂಮಿಯನ್ನು ಅರಣ್ಯ ಇಲಾಖೆಗೆ ನೀಡಲು ಸ್ವಯಂ ಪ್ರೇರಿತರಾಗಿ ಮುಂದೆ ಬಂದಿದ್ದಾರೆ. 2012ರಲ್ಲಿ ಜಿಲ್ಲಾ ಮಟ್ಟದ ಸಮಿತಿಯು ಈ ಸಂಬಂಧ ಸಮಗ್ರ ವರದಿಯನ್ನು ತಯಾರಿಸಿದೆ. ಹೆತ್ತೂರು ಭಾಗದಲ್ಲಿ ಕಾಡಾನೆಗಳು ಹೆಚ್ಚಿರುವುದರಿಂದ ಅಲ್ಲಿನ ರೈತರು ಜೀವ ಭಯದಲ್ಲೇ ಇದ್ದಾರೆ. ಸೂಕ್ತ ಪರಿಹಾರ ಕಲ್ಪಿಸಿದರೆ ಭೂಮಿ ನೀಡಲು ಈಗಲೂ ರೈತರು ಸಿದ್ಧರಿದ್ದಾರೆ. ಆದ್ದರಿಂದ (ಕಾಂಪಾ) ಯೋಜನೆಯಡಿ ಪರಿಹಾರ ಕಲ್ಪಿಸಬೇಕು ಎಂದು ಕೋರಿದರು. ಆನೆ ಕಾರಿಡಾರ್ ನಿರ್ಮಾಣವೊಂದೇ ಅಲ್ಲಿನ ಜನರಿಗೆ ನೆಮ್ಮದಿಯ ಬದುಕು ಕಲ್ಪಿಸುವ ದಾರಿಯಾಗಿದೆ.

ಒಟ್ಟು 416 ಭೂಮಾಲೀಕರು ತಮ್ಮ 2261.21 ಎಕರೆ ಭೂಮಿಯನ್ನು ಹಸ್ತಾಂತರಿಸಲು ಲಿಖಿತ ಮನವಿಯನ್ನು ನೀಡಿದ್ದರು. ಅರಣಿ ಗ್ರಾಮದ 55 ರೈತರು 368.13 ಎಕರೆ, ಬೋರನಮನೆ 62 ರೈತರು 406.19 ಎಕರೆ, ಬಾಳೆಹಳ್ಳ ಗ್ರಾಮದ 46 ರೈತರು 272 ಎಕರೆ, ಬೆಟ್ಟಕುಮಾರಿ ಊರಿನ 62 ರೈತರು 218.37, ಮಂಕನಹಳ್ಳಿ 101 ರೈತರು 578.25 ಎಕರೆ, ಯತ್ನಹಳ್ಳದ 85 ರೈತರು 369.17, ಬಾಜಿಮನೆ ಎಸ್ಟೇಟ್ ನ 5 ರೈತರು 48 ಎಕರೆ ಭೂಮಿ ನೀಡಲು ಒಪ್ಪಿಗೆ ಸೂಚಿಸಿದ್ದಾರೆ.

## ಐತಿಹಾಸಿಕ ದೇವಾಲಯಗಳ ಗೋಡೆ ಬಿರುಕು

ಹಾಸನ ಜಿಲ್ಲೆಯ ಬೇಲೂರು ಚನ್ನಕೇಶವ ಸ್ವಾಮಿ ದೇವಾಲಯ ಹಾಗೂ ಶ್ರವಣಬೆಳಗೊಳ ಬಾಹುಬಲಿ ಗೊಮ್ಮಟೇಶ್ವರಮೂರ್ತಿ ವಿಶ್ವ ವಿಖ್ಯಾತ ಸ್ಥಳಗಳಾಗಿವೆ. ಚನ್ನಕೇಶವ ಸ್ವಾಮಿ ದೇವಾಲಯ ಹೊಯ್ಸಳರ ಪ್ರತೀಕವಾಗಿದ್ದರೆ, ಬಾಹುಬಲಿ ಗೊಮ್ಮಟೇಶ್ವರಮೂರ್ತಿ ಪ್ರತಿ 12 ವರ್ಷಕ್ಕೊಮ್ಮೆ ನಡೆಯುವ ಮಹಾಮಸ್ತಕಾಭಿಷೇಕಕ್ಕೆ ಹೆಸರುವಾಸಿಯಾಗಿದೆ.

ಐತಿಹಾಸಿಕ ಸ್ಥಳಗಳ ಗೋಡೆಗಳು ಕುಸಿಯುವ ಆತಂಕ ಕಾಡುತ್ತಿದ್ದು ತಕ್ಷಣವೇ ದುರಸ್ತಿ ಕಾರ್ಯ ಕೈಗೊಂಡು ಪ್ರವಾಸಿ ತಾಣಗಳ ರಕ್ಷಣೆಗೆ ನೆರವಾಗಬೇಕು ಎಂದು ಸಂಸತ್‌ನಲ್ಲಿ ಸಂಸದ ಶ್ರೇಯಸ್ ಪಟೇಲ್ ವಿಷಯ ಪ್ರಸ್ತಾಪಿಸಿದ್ದಾರೆ.

# ಹೈನುಗಾರಿಕೆಯಿಂದ ಸ್ವಾವಲಂಬಿ ಬದುಕು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಹೈನುಗಾರಿಕೆ ಮೂಲಕ ಸಾಕಷ್ಟು ಮಹಿಳೆಯರು ಸ್ವಾವಲಂಬಿ ಬದುಕು ಕಟ್ಟಿಕೊಂಡಿದ್ದಾರೆ ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಹೇಳಿದರು.

ತಾಲ್ಲೂಕಿನ ಮಾದಲಗೆರೆ ಗ್ರಾಮದಲ್ಲಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ನೂತನ ಕಟ್ಟಡ ಉದ್ಘಾಟಿಸಿ ಮಾತನಾಡಿದ ಅವರು,

ದಿನದಿಂದ ದಿನಕ್ಕೆ ಪ್ರಗತಿ ಕಾಣುತ್ತಿರುವ ಹೈನುಗಾರಿಕೆಯಲ್ಲಿ ಮಹಿಳೆಯರ ಪಾತ್ರ ಪ್ರಮುಖ ಎಂದರು.

ತೋಟಿಕೆರೆ ಏತನೀರಾವರಿ ಯೋಜನೆಯ ಕಾಮಗಾರಿ ಪ್ರಗತಿಯಲ್ಲಿದ್ದು ಮುಂದಿನ ಹಂಗಾಮಿನಲ್ಲಿ ನೀರು ಹರಿಸುವ ಕಾರ್ಯಕ್ಕೆ ಚಾಲನೆ ನೀಡಲಾಗುವುದು. ಈ ಯೋಜನೆಯಡಿ ವ್ಯಾಪ್ತಿಯ ಸುಮಾರು 26ಕ್ಕೂ ಹೆಚ್ಚು ಕೆರೆಕಟ್ಟೆಗಳಿಗೆ ನೀರು ಹರಿಯಲಿದೆ.



ಇದರಿಂದ ವ್ಯಾಪ್ತಿಯ ಅಂತರ್ಜಲ ಚೇತರಿಕೆ ಕಾಣಲಿದೆ ಎಂದು ತಿಳಿಸಿದರು.

ಹೇಮಾವತಿ ನದಿಯಿಂದ ತಾಲ್ಲೂಕಿನ ಎಲ್ಲ ಗ್ರಾಮಗಳಿಗೆ ಪೈಪ್‌ಲೈನ್ ವ್ಯವಸ್ಥೆ ಮೂಲಕ ಕುಡಿಯುವ ನೀರು ಪೂರೈಕೆ ಮಾಡುವ ಕಾಮಗಾರಿ ಪ್ರಗತಿಯಲ್ಲಿದೆ. ಇನ್ನು ದಿಡಗ ಏತ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಂಡಿದ್ದು ಪ್ರಸ್ತಾವನೆಯ ಹಂತದಲ್ಲಿದೆ ಎಂದರು.

ಬೇಸಿಗೆಯ ಜತೆಗೆ ತಾಲ್ಲೂಕಿನ ವಿವಿಧೆಡೆ ಇತ್ತೀಚಿಗೆ ತಕ್ಕಮಟ್ಟಿಗೆ ಮಳೆಯಾಗಿದೆ. ಸದ್ಯಕ್ಕೆ ಬೇಸಿಗೆ ಅವಧಿಯಲ್ಲಿ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡುಬಂದಿಲ್ಲ ಎಂದರು.

ಜೆಡಿಎಸ್ ರಾಜ್ಯ ಉಪಾಧ್ಯಕ್ಷ ಎಚ್.ಜಿ. ರಾಮಕೃಷ್ಣ, ಹೇಮಾವತಿ ಸಹಕಾರ ಸಕ್ಕರೆ ಕಾರ್ಖಾನೆಯ ಮಾಜಿ ಅಧ್ಯಕ್ಷ ತೋಟಿ ಜಯರಾಮ್, ಬೆಳಗೀಹಳ್ಳಿ ಸೊಸೈಟಿ ನಿರ್ದೇಶಕ ತೋಟಿ ನಾಗರಾಜ್, ಜಿನ್ನೇನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಪಾರ್ವತಮ್ಮ ದೇವರಾಜ್, ಉಪಾಧ್ಯಕ್ಷ ದಿನೇಶ್, ಸದಸ್ಯರಾದ ಶೃತಿ ಮಧು, ಜೆ.ಎಸ್.ಮಂಜುನಾಥ್, ಕೋಡಿಲಿಂಗೇಗೌಡ, ಹಾಸನ ಹಾಲು ಒಕ್ಕೂಟದ ಸಹಾಯಕ ವ್ಯವಸ್ಥಾಪಕ ಟಿ.ಕೃಷ್ಣಮೂರ್ತಿ, ತಾಂತ್ರಿಕ ಅಧಿಕಾರಿ ಟಿ.ಎಸ್.ಪ್ರಶಾಂತ್, ಸಂಘದ ಅಧ್ಯಕ್ಷೆ ಸುಂದರಮ್ಮ ಕುಮಾರ್ ಇತರರಿದ್ದರು.

# ಐತಿಹಾಸಿಕ ಲೋಪ ಸರಿಪಡಿಸಿದ ಪ್ರಧಾನಿ ಮೋದಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ವಕ್ಫ್ ತಿದ್ದುಪಡಿ ಮಸೂದೆ ಜಾರಿ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರು ಕಾಂಗ್ರೆಸ್‌ನ ಐತಿಹಾಸಿಕ ಲೋಪವನ್ನು ಸರಿಪಡಿಸಿದ್ದಾರೆ ಎಂದು ಸಕಲೇಶಪುರ ಶಾಸಕ ಸಿಮೆಂಟ್ ಮಂಜು ಹೇಳಿದ್ದಾರೆ.

ವಕ್ಫ್ (ತಿದ್ದುಪಡಿ) ಮಸೂದೆಯು ಪಾರದರ್ಶಕತೆ, ಹೊಣೆಗಾರಿಕೆ ಮತ್ತು ನ್ಯಾಯ ಸಮ್ಮತೆಗೆ ಪ್ರಮುಖ ಹೆಜ್ಜೆಯಾಗಿದೆ. ಇದು ವಕ್ಫ್ ಆಸ್ತಿಗಳನ್ನು ಜವಾಬ್ದಾರಿಯುತವಾಗಿ ನಿರ್ವಹಿಸುವುದನ್ನು ಖಚಿತಪಡಿಸುತ್ತದೆ ಮತ್ತು ಸಾರ್ವಜನಿಕ ಭೂಮಿಯ ದುರುಪಯೋಗ ತಡೆಯುತ್ತದೆ ಎಂದು ಪ್ರತಿಪಾದಿಸಿದ್ದಾರೆ.

ವಕ್ಫ್ ತಿದ್ದುಪಡಿ ಮಸೂದೆಯ ಕುರಿತು ಅರಿಯದ ಸಂಸದ ಶ್ರೇಯಸ್ ಪಟೇಲ್ ಅವರು ಮತ ನೀಡಿದ ಮುಸ್ಲಿಂರನ್ನು ಸಂತೋಷಪಡಿಸಲು ಕೇಂದ್ರ ಸರ್ಕಾರದ ವಿರುದ್ಧ ಹೇಳಿಕೆ ನೀಡುತ್ತಿದ್ದಾರೆ ಎಂದು ತಿರುಗೇಟು ನೀಡಿದ್ದಾರೆ.



ಶ್ರೇಯಸ್ ಪಟೇಲ್ ಅವರು ವಕ್ಫ್ ಕಾಯ್ದೆ ಸರಿಯಾಗಿ ತಿಳಿದುಕೊಳ್ಳದೆ ವೋಟು ನೀಡಿದ ಮುಸಲ್ಮಾನರನ್ನು ಸಂತೋಷಪಡಿಸಲು ಕಾಯ್ದೆ ವಿರುದ್ಧ ಹೇಳಿಕೆ ನೀಡಿದ್ದಾರೆ. ಸಂಸದರಾಗಲು ಹಿಂದೂಗಳು ಮತ ಹಾಕಿದ್ದಾರೆ ಎಂಬುದನ್ನು ಮರೆಯಬಾರದು. ಮಧ್ಯರಾತ್ರಿ ಏಕಾಏಕಿ ಮಸೂದೆ ಅಂಗೀಕಾರವಾಗಿದೆ ಎನ್ನುವ ಸಂಸದರಿಗೆ ನಮ್ಮ ದೇಶಕ್ಕೆ ಮಧ್ಯರಾತ್ರಿಯೇ ಸ್ವಾತಂತ್ರ್ಯ ಬಂದಿತು ಎಂಬುದು ಗೊತ್ತಿಲ್ಲವೇ. ಕಾಂಗ್ರೆಸ್‌ನ ನಾಯಕ ರಾಹುಲ್ ಗಾಂಧಿ ಸಹ ಮಸೂದೆ ಕುರಿತು ತುಟಿ ಬಿಚ್ಚದೆ ಇರುವುದು ಏಕೆ ಎಂದು ಪ್ರಶ್ನಿಸಿದ್ದಾರೆ.

ಹಿಂದು ದೇವಸ್ಥಾನಗಳ, ರೈತರ ಆಸ್ತಿಯನ್ನು ಕಬಳಿಸುವ ವಕ್ಫ್ ಕಾಯ್ದೆಯನ್ನು ಬೆಂಬಲಿಸುವ ಸಂಸದರ ನಡೆ ಖಂಡನೀಯ. ಈ ರೀತಿಯ ತುಷ್ಟೀಕರಣದ ರಾಜಕಾರಣಕ್ಕೆ ಆಯಸ್ಸು ಇಲ್ಲ ಎಂದು ವಾಗ್ದಾಳಿ ನಡೆಸಿದ್ದಾರೆ.

ಕಾಯ್ದೆ ತಿದ್ದುಪಡಿಯಿಂದ ಬಡ ಮತ್ತು ಹಿಂದುಳಿದ ನೊಂದ ಮುಸ್ಲಿಮರಿಗೆ ಅನುಕೂಲವಾಗಲಿದೆ. ಅರಕಲಗೂಡು ತಾಲ್ಲೂಕಿನ ಇತಿಹಾಸ ಪ್ರಸಿದ್ಧ ಗೌರಿ ಕಟ್ಟೆ, ಬೇಲೂರಿನ ಐತಿಹಾಸಿಕ ಸ್ಥಳಗಳು, ಅರಸೀಕೆರೆ, ಹಾಸನ ಹೀಗೆ ಜಿಲ್ಲೆಯ ಹಲವಾರು ಹಿಂದೂ ದೇವಾಲಯ ಜಾಗ ಹಾಗು ರೈತರ ಆಸ್ತಿಯನ್ನು ವಕ್ಫ್ ಆಸ್ತಿ ಎಂದು ಹೇಳಲಾಗಿದೆ. ಇಂತಹ ಪ್ರಮಾದಗಳಿಗೆ ಇನ್ನು ಮುಂದೆ ಕಡಿವಾಣ ಬೀಳಲಿದೆ ಎಂದಿದ್ದಾರೆ.

ಯುಪಿಎ ಸರ್ಕಾರವು ಮತ-ಬ್ಯಾಂಕ್ ರಾಜಕೀಯಕ್ಕಾಗಿ ರಾಷ್ಟ್ರವನ್ನು ವಕ್ಫ್ ಮಂಡಳಿಗೆ ಅಡಮಾನ ಇಟ್ಟಿತ್ತು. ಇದು ಮುಂದುವರಿದಿದ್ದರೆ, ಭಾರತ ಮತ್ತೊಮ್ಮೆ ಮೊಘಲರ ಮತ್ತು ಅಧೀನತೆಯ ಯುಗಕ್ಕೆ ತಳ್ಳಲ್ಪಡುತ್ತಿತ್ತು ಎಂದು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

# ರಾಗಿ ಖರೀದಿಗೆ ಹಣದ ಬೇಡಿಕೆ



ಅರಕಲಗೂಡು: ತಾಲ್ಲೂಕಿನ ಎಪಿಎಂಸಿ ಮಾರುಕಟ್ಟೆಯಲ್ಲಿ ತೆರೆದಿರುವ ರಾಗಿ ಖರೀದಿ ಕೇಂದ್ರದಲ್ಲಿ ರೈತರಿಂದ ತಲಾ 100 ರೂ. ಲಂಚ ಪಡೆಯಲಾಗುತ್ತಿದೆ ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದರು.

ಬೆಂಬಲ ಬೆಲೆ ಯೋಜನೆಯಡಿ ರಾಗಿ ಖರೀದಿ ಮಾಡಲಾಗುತ್ತಿದೆ. ಆದರೆ ರೈತರಿಂದ ಹಣ ಸ್ವೀಕರಿಸುತ್ತಿರುವುದು ಖಂಡನೀಯ ಎಂದು ಅನ್ನದಾತರು ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆ ಸುದ್ದಿ ತಿಳಿದು ತಹಶೀಲ್ದಾರ್ ಸೌಮ್ಯ ಸ್ಥಳಕ್ಕೆ ಭೇಟಿ ನೀಡಿದರು.

ರೈತರು ಮಾತನಾಡಿ, ರಾಗಿ ಖರೀದಿ ಕೇಂದ್ರದಲ್ಲಿ ರೈತರಿಂದ ಅಧಿಕಾರಿಗಳು 100 ರೂ. ಪಡೆಯುತ್ತಿದ್ದಾರೆ. ರಾಗಿ ತಂದು ಮೂರು ದಿನವಾದರೂ ಖರೀದಿಸುತ್ತಿಲ್ಲ. ತೂಕದಲ್ಲೂ 1 ರಿಂದ 3 ಕೆ.ಜಿ. ಹೆಚ್ಚುವರಿ ರಾಗಿ ಪಡೆಯುತ್ತಿದ್ದಾರೆ. ರಾಗಿ ಬಿಡಲು ಬಂದ ಗಾಡಿಗಳನ್ನು ಮಳೆಯಿಂದ ರಕ್ಷಿಸಲು ಸರಿಯಾದ ಜಾಗವಿಲ್ಲ. ನಾವೇ 500 ರೂ. ಖರ್ಚು ಮಾಡಿ ಪ್ಲಾಸ್ಟಿಕ್‌ನಿಂದ ಪದಾರ್ಥ ಮುಚ್ಚಲಾಗಿದೆ. ನೀರು, ಶೌಚಾಲಯವಿಲ್ಲದೆ ಪರದಾಡುವಂತಾಗಿದೆ. ಆದರೂ ಆಹಾರ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿಲ್ಲ ಎಂದು ಆಕ್ರೋಶ ಹೊರಹಾಕಿದರು.

# ಏ.7 ರಿಂದ ಸರ್ಕಾರಿ ನೌಕರರ ಕ್ರೀಡಾಕೂಟ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಏ. 7 ಮತ್ತು 8 ರಂದು ಎರಡು ದಿನ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಶಾಖೆ ಆಶ್ರಯದಲ್ಲಿ 2024-25ನೇ ಸಾಲಿನ ಜಿಲ್ಲಾ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ಬಿ.ಪಿ. ಕೃಷ್ಣೇಗೌಡ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿ, ಜಿಲ್ಲಾ ಕ್ರೀಡಾಂಗಣ, ಹಾಸನಾಂಬ ಒಳಾಂಗಣ ಕ್ರೀಡಾಂಗಣದಲ್ಲಿ ಕ್ರೀಡಾಸ್ಪರ್ಧೆ ನಡೆದರೆ ಯೂತ್ ಹಾಸ್ಟೆಲ್ ಸಭಾಂಗಣದಲ್ಲಿ ಸಾಂಸ್ಕೃತಿಕ ನಡೆಯಲಿವೆ ಎಂದು ಮಾಹಿತಿ ನೀಡಿದರು.

ಮೊದಲ ದಿನ ಬೆಳಗ್ಗೆ 11 ಗಂಟೆಗೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್. ರಾಜಣ್ಣ ಕ್ರೀಡಾಕೂಟ ಉದ್ಘಾಟಿಸುವರು.



ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಉಪಸ್ಥಿತರಿರುವರು. ಶಾಸಕ ಹೆಚ್.ಪಿ. ಸ್ವರೂಪ್ ಅಧ್ಯಕ್ಷತೆ ವಹಿಸಿದ್ದು, ಜಿಲ್ಲೆಯ ಎಲ್ಲ ಶಾಸಕರು,

ವಿಧಾನ ಪರಿಷತ್ ಸದಸ್ಯರು, ಜಿಲ್ಲಾಮಟ್ಟದ ಎಲ್ಲ ಅಧಿಕಾರಿಗಳು ಭಾಗಿಯಾಗಲಿದ್ದಾರೆ ಎಂದರು. ಎರಡು ದಿನಗಳ ಕಾಲ ಫುಟ್ಬಾಲ್, ವಾಲಿಬಾಲ್, ಹಾಕಿ, ಕಬಡ್ಡಿ, ಟೇಬಲ್ ಟೆನ್ನಿಸ್, ಟೆನ್ನಿಸ್, ಷಟಲ್ ಬ್ಯಾಡ್ಮಿಂಟನ್, ಕೇರಂ, ಬಾಲ್ ಬ್ಯಾಡ್ಮಿಂಟನ್, ಕ್ರಿಕೆಟ್, ಬ್ಯಾಸ್ಕೆಟ್ ಬಾಲ್, ಚೆಸ್, ಟೆನ್ನಿ ಕಾಯ್ಟ್, ಥ್ರೋ ಬಾಲ್, ಯೋಗ ಖೋ ಖೋ, ಈಜು, ಆಯ್ಕೆ ಕ್ರೀಡೆಗಳಾದ ಕುಸ್ತಿ, ಭಾರ ಎತ್ತುವ ಸ್ಪರ್ಧೆ, ಪವರ್ ಲಿಫ್ಟಿಂಗ್, ದೇಹದಾರ್ಢ್ಯ ಇತರೆ ಕ್ರೀಡೆಗಳು ನಡೆಯಲಿವೆ. ಇವುಗಳಲ್ಲಿ ಸಿಂಗಲ್ಸ್ ಮತ್ತು ಡಬಲ್ಸ್, ವೈಯಕ್ತಿಕ ಸಿಂಗಲ್ಸ್ ಮತ್ತು ಡಬಲ್ಸ್ , ವೈಯಕ್ತಿಕ ಮತ್ತು ಗುಂಪು ಇರಲಿವೆ ಎಂದು ವಿವರಿಸಿದರು.

ಜಿಲ್ಲೆಯ ಪ್ರತಿಯೊಬ್ಬರೂ ಭಾಗಿಯಾಗಿ ಕ್ರೀಡಾಕೂಟ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದ ಅವರು, ಈ ಬಾರಿ ದೈಹಿಕ ಶಿಕ್ಷಕರೂ ಕ್ರೀಡಾಕೂಟದಲ್ಲಿ ಭಾಗಿಯಾಗಲು ಅವಕಾಶ ಮಾಡಿಕೊಡಲಾಗಿದೆ ಎಂದರು. ಈಗಾಗಲೇ 2200 ನೌಕರರು ನೊಂದಣಿ ಮಾಡಿಕೊಂಡಿದ್ದು, ಹತ್ತಿರ 3 ಸಾವಿರ ನೌಕರರು ಭಾಗಿಯಾಗುವ ನಿರೀಕ್ಷೆ ಇದೆ ಎಂದರು.

ಇದೇ ಮೊದಲ ಬಾರಿಗೆ ಜಿಲ್ಲಾಧಿಕಾರಿ ಸಿ.ಸತ್ಯಭಾಮ ಅವರ ಒತ್ತಾಸೆಯ ಮೇರೆಗೆ ಖ್ಯಾತ ಹಿನ್ನಲೆ ಗಾಯಕಿ ಅನುರಾಧ ಭಟ್ ಮತ್ತು ತಂಡದವರಿಂದ ಸಂಗೀತ ಸಂಜೆ ಹಾಗೂ ಕಾಮಿಡಿ ಕಿಲಾಡಿಗಳು ಮತ್ತು ತಂಡದವರಿಂದ ಹಾಕಿ ಮೈದಾನದಲ್ಲಿ ಹಾಸ್ಯ ಸಂಜೆ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಜಿಲ್ಲಾ ಸರಕಾರಿ ನೌಕರರ ಸಂಘದ ಉಪಾಧ್ಯಕ್ಷ ಕೆ.ವಿ. ಪಾರ್ಥೇಶ್, ಡಾ.ಹೆಚ್.ವಿ. ಪಲ್ಲವಿ. ಕ್ರೀಡಾ ಕಾರ್ಯದರ್ಶಿ ಆರ್. ಆಶಾ, ಖಜಾಂಚಿ ಕೆ.ಆರ್. ಹೇಮಂತ್, ಜಿಲ್ಲಾ ಕಾರ್ಯದರ್ಶಿ ಬಿ.ಎಂ. ಲಕ್ಷ್ಮೀಕಾಂತ್, ಕ್ರೀಡಾ ಕಾರ್ಯದರ್ಶಿ ಬಿ.ಕೆ. ರವೀಂದ್ರ ಮೊದಲಾದವರಿದ್ದರು.

# ಗೋವಿಗೆ ಸೀಮಂತ ನೆರವೇರಿಸಿದ ಗೋಮತಿ ದಿನೇಶ್



ಹಾಸನ: ನಗರದ ಉದ್ಯಮಿ ಗೋಮತಿ ದಿನೇಶ್ ಅವರು ಶುಕ್ರವಾರ ಚನ್ನಪಟ್ಟಣ ಬಡಾವಣೆಯಲ್ಲಿರುವ ಗೋಮತಿ ಕಲ್ಯಾಣ ಮಂಟಪದಲ್ಲಿ ತಾವು ಸಾಕಿದ ಹಸುವಿಗೆ ಸೀಮಂತ ಮಾಡುವ ಮೂಲಕ ಸಂಪ್ರದಾಯ ಮೆರೆದರು.

ಉದ್ಯಮಿ ಗೋಮತಿ ದಿನೇಶ್ ಅವರ ಈ ಪರಿಕಲ್ಪನೆ ಅತ್ಯಂತ ಯಶಸ್ವಿಯಾಗಿ ನೆರವೇರಿತು ಮಾತ್ರವಲ್ಲದೆ ಸಾರ್ವಜನಿಕರು ಮೆಚ್ಚುಗೆ ಸಹ ಸೂಚಿಸಿದರು. ಮಾತೆ ರೂಪದಲ್ಲಿ ಪೂಜಿಸುವ ಗರ್ಭಿಣಿ ಹಸುವಿಗೆ ಆ ಭಾಗ್ಯ ಕರುಣಿಸಿದ್ದು ದಿನೇಶ್ ಅವರ ಗೋವು ಪ್ರೀತಿಗೆ ಸಾಕ್ಷಿಯಾಯಿತು. ಸೀಮಂತ ಸಮಾರಂಭ ಹಿನ್ನೆಲೆಯಲ್ಲಿ ಭರ್ಜರಿ ಊಟದ ವ್ಯವಸ್ಥೆ ಮಾಡಲಾಗಿತ್ತು.

ಈ ವೇಳೆ ದಿನೇಶ್ ಮಾತನಾಡಿ, ಪೂರ್ವಿಕರು ಗರ್ಭ ಧರಿಸಿದ ಹಸುಗಳಿಗೆ ಪೂಜೆ ಸಲ್ಲಿಸುತ್ತಿದ್ದರು. ಆದರೆ ಆಧುನಿಕತೆ ಬೆಳೆದಂತೆ ಪ್ರಾಚೀನ ಸಂಪ್ರದಾಯಗಳು ಕಣ್ಮರೆಯಾಗುತ್ತಿವೆ. ಗೋವುಗಳನ್ನು ನಾವು ಪೂಜನೀಯ ಸ್ಥಾನದಲ್ಲಿ ನೋಡುತ್ತವೆ. ಪರಂಪರೆ ಅಳಿಯಬಾರದು ಎಂಬ ಉದ್ದೇಶದಿಂದ ಸೀಮಂತ ಸಮಾರಂಭ ಆಯೋಜಿಸಲಾಗಿದೆ. ತಮ್ಮ ಮನೆಯ ಹಳ್ಳಿಕಾರ್ ತಳಿಯ ಹಸುವಿಗೆ ಸೀಮಂತ ಮಾಡಿದ್ದೇವೆ ಎಂದರು.

# ಸ್ವಚ್ಛತೆಗೆ ಆದ್ಯತೆ ನೀಡಲು ಲೋಕಾ ಎಸ್ಪಿ ನಿರ್ದೇಶನ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ನಗರದಲ್ಲಿ ಹೆಚ್ಚುತ್ತಿರುವ ಕಸದ ರಾಶಿ ಹಾಗೂ ಅನೈರ್ಮಲ್ಯವನ್ನು ಗಂಭೀರವಾಗಿ ಪರಿಗಣಿಸಿರುವ ಲೋಕಾಯುಕ್ತ ಎಸ್ಪಿ ಬಿ.ಎನ್. ನಂದಿನಿ ಅವರು ದಿಢೀರ್ ಸ್ಥಳ ಭೇಟಿ ಮೂಲಕ ನಗರಸಭೆ ಅಧಿಕಾರಿಗಳ ಚಳಿ ಬಿಡಿಸಿದ್ದಾರೆ.

ಹಾಸನ ನಗರಸಭೆ ಮಹಾನಗರ ಪಾಲಿಕೆಯಾಗಿ ಮೇಲ್ದರ್ಜೆಗೇರಿರುವುದರಿಂದ 35ಕ್ಕೂ ಹೆಚ್ಚಿನ ಗ್ರಾಮಗಳು ನಗರ ಪಾಲಿಕೆ ವ್ಯಾಪ್ತಿಗೆ ಒಳಪಟ್ಟಿವೆ. ಆದರೆ, ಆ ಗ್ರಾಮಗಳ ಸ್ವಚ್ಛತೆಯೂ ನಗರಸಭೆ ವ್ಯಾಪ್ತಿಗೆ ಬರುವುದರಿಂದ ಪೌರಕಾರ್ಮಿಕರ ಸಮಸ್ಯೆ ನೆಪ ಹೇಳಿಕೊಂಡು ನಿರ್ಲಕ್ಷ್ಯ ತಾಳಿರುವುದರಿಂದ ನಗರದ ಎಲ್ಲೆಂದರಲ್ಲಿ ಕಸದ ಸಮಸ್ಯೆ ಹೆಚ್ಚಾಗಿದೆ. ಅಲ್ಲದೇ ಕಸ ವಿಲೇವಾರಿ, ಸಂಸ್ಕರಣೆ ಕೂಡ ಸವಾಲಾಗಿ ಪರಿಣಮಿಸಿರುವುದರಿಂದ ನಾಗರಿಕರು ಸಮಸ್ಯೆ ಅನುಭವಿಸುವಂತಾಗಿದೆ.

ನಗರದಲ್ಲಿ ಎದುರಾಗಿರುವ ಕಸದ ಸಮಸ್ಯೆ ಮನಗಂಡ ಲೋಕಾಯುಕ್ತ ಎಸ್ಪಿ ಬಿ.ಎನ್. ನಂದಿನಿ ಅವರ ನೇತೃತ್ವದಲ್ಲಿ ಅಧಿಕಾರಿಗಳು ಕಸದ ಸ್ಥಳ ಹಾಗೂ ಕಸ ವಿಲೇವಾರಿ ಮಾಡುವ ತಾಲ್ಲೂಕಿನ ಅಗಿಲೆ ಬಳಿಯ ತ್ಯಾಜ್ಯ ವಿಲೇವಾರಿ ಘಟಕಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ವೇಳೆ ಸಮರ್ಪಕವಾಗಿ ಕಸ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳದ ನಗರಸಭೆ ಆಯುಕ್ತ ಕೆ.ಎಂ. ರಮೇಶ್, ಆರೋಗ್ಯ ನಿರೀಕ್ಷಕರು, ಅಧಿಕಾರಿಗಳ ವಿರುದ್ಧ ಅಸಮಾಧಾನ ಹೊರಹಾಕಿದರು.

ಇದಲ್ಲದೆ ನಗರದ ಎಲ್ಲೆಲ್ಲಿ ಕಸ ವಿಲೇವಾರಿ ಆಗದ ಜಾಗಗಳಿಗೂ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಈ ವೇಳೆ ಕಸದ ರಾಶಿಕಂಡ ಅಸಮಾಧಾನಗೊಂಡ ಎಸ್ಪಿ ಬಿ.ಎನ್. ನಂದಿನಿ ಅವರು, ಸರಿಯಾಗಿ ತ್ಯಾಜ್ಯ ವಿಲೇವಾರಿ ಮಾಡದಕ್ಕೆ ನಗರಸಭೆ ಅಧಿಕಾರಿಗಳ ವಿರುದ್ಧ ಗರಂ ಆದರು.



## ಪೌರ ಕಾರ್ಮಿಕರ ಕೊರತೆ

ಸ್ಥಳೀಯ ಸಂಸ್ಥೆಗಳಲ್ಲಿ ಪ್ರತಿ 500 ಜನಸಂಖ್ಯೆಗೆ ಒಬ್ಬ ಪೌರ ಕಾರ್ಮಿಕರನ್ನು ನೇಮಕ ಮಾಡುವಂತೆ ಐಪಿಡಿ ಸಾಲಪ್ಪ ಸಮಿತಿ ವರದಿ ಹೇಳಿದೆ. ಆದರೆ, ಸರ್ಕಾರ ಪ್ರತಿ 700 ಜನಸಂಖ್ಯೆಗೆ ಒಬ್ಬರು ಪೌರಕಾರ್ಮಿಕರನ್ನು ನಿಯೋಜಿಸಲು ಒಪ್ಪಿಗೆ ಸೂಚಿಸಿತ್ತು. ಆದರೆ, ನಗರದಲ್ಲಿ 5 ರಿಂದ 6 ಸಾವಿರ ಜನಸಂಖ್ಯೆ ಇರುವ ವಾರ್ಡ್‌ಗಳಿಗೆ 2 ರಿಂದ 3 ಪೌರಕಾರ್ಮಿಕರು ಕೆಲಸ ನಿರ್ವಹಿಸಬೇಕಾದ ಅನಿವಾರ್ಯತೆ ಎದುರಾಗಿದೆ.

ನಗರದ ಜನಸಂಖ್ಯೆಗೆ ಅನುಗುಣವಾಗಿ ಕನಿಷ್ಠ 1,500 ಪೌರಕಾರ್ಮಿಕರ ಅಗತ್ಯವಿದೆ. ಆದರೆ, ಹಾಸನ ನಗರಸಭೆಯಲ್ಲಿ ಖಾಯಂ ಪೌರಕಾರ್ಮಿಕರ ಸಂಖ್ಯೆಯೇ ಕಡಿಮೆ ಇದೆ. ಹೊರಗುತ್ತಿಗೆ ಆಧಾರ ಮೇಲೆ ನೇಮಕ ಮಾಡಿಕೊಂಡಿರುವ ಪೌರಕಾರ್ಮಿಕರನ್ನು ಆಟೋಗಳಲ್ಲಿ ಮನೆ ಮನೆಗೆ ಕಸ ಸಂಗ್ರಹಕ್ಕೆ ಕಳುಹಿಸಲಾಗುತ್ತಿದೆ. ಆಟೋ, ಟಿಪ್ಪರ್, ಟ್ರ್ಯಾಕ್ಟರ್‌ಗೆ ಕಸ ತುಂಬಲು ಈಗಿರುವ ಪೌರಕಾರ್ಮಿಕರು ಸಾಕಾಗುತ್ತಿಲ್ಲ. ಅದು ಮಾತ್ರವಲ್ಲದೇ ಇರುವ ಪೌರಕಾರ್ಮಿಕರನ್ನು ಅನ್ಯ ಕೆಲಸಗಳಿಗೆ ನಿಯೋಜನೆಗೊಳಿಸಿಕೊಳ್ಳಲಾಗಿದೆ. ಹೀಗಾಗಿ ವಾರ್ಡ್‌ಗಳಲ್ಲಿ ಎರಡು ದಿನಕ್ಕೊಮ್ಮೆ ಕಸ ಸಂಗ್ರಹಕ್ಕೆ ಆಟೋಗಳು ಬರುತ್ತಿವೆ. ಇನ್ನೂ ರಸ್ತೆ ಬದಿ ಬಿದ್ದಿರುವ ಕಸವನ್ನು 15-20 ದಿನಗಳಿಗೆ ಒಮ್ಮೆ ಎತ್ತಲಾಗುತ್ತಿದೆ.

## ಎಲ್ಲೆಂದರಲ್ಲಿ ಕಸದ ರಾಶಿ

ನಗರದಲ್ಲಿ ಎಲ್ಲೆಂದರಲ್ಲಿ ಕಸದ ರಾಶಿ ಕಣ್ಣಿಗೆ ರಾಚುತ್ತಿದೆ. ನಗರದ 80 ಅಡಿ ರಸ್ತೆಯುದ್ದಕ್ಕೂ ಕಸ ಹಾಕಿರುವುದರಿಂದ ಈ ರಸ್ತೆಯಲ್ಲಿ ಸಂಚರಿಸುವ ಜನರು ಮೂಗು ಮುಚ್ಚಿಕೊಂಡು ಓಡಾಡುವ ಸ್ಥಿತಿ ನಿರ್ಮಾಣವಾಗಿದೆ. ರಸ್ತೆ, ಕಾಂಪೌಂಡ್ ಎಲ್ಲಿಬೇಕಲ್ಲಿ ಜನರು ಕೂಡ ಮನಬಂದಂತೆ ಕಸ ಎಸೆಯುತ್ತಿರುವುದರಿಂದ ನಗರದ ನೈರ್ಮಲ್ಯ ಹಾಳಾಗುತ್ತಿದೆ. ಹಲವು ಕಡೆಗಳಲ್ಲಿ ತ್ಯಾಜ್ಯ ಚರಂಡಿ ಸೇರಿಕೊಂಡಿರುವುದರಿಂದ ಮಳೆ ನೀರು ಸರಾಗವಾಗಿ ಹರಿಯದೆ ಕೊಳಚೆ ನೀರು ರಸ್ತೆ ಮೇಲೆಲ್ಲ ಹರಿಯುತ್ತಿರುವುದರಿಂದ ಜನರು ಓಡಾಡುವುದೇ ಕಷ್ಟಕರವಾಗಿದೆ.

ಈ ರೀತಿಯ ನಿರ್ಲಕ್ಷ್ಯ ಮಳೆಗಾಲ ಸಂದರ್ಭದಲ್ಲೂ ಮುಂದುವರೆದರೆ ಸಾರ್ವಜನಿಕರ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದರೆ ಯಾರು ಹೊಣೆ ಎಂದು ಪ್ರಶ್ನಿಸಿದರು. ಸರಿಯಾಗಿ ತ್ಯಾಜ್ಯ ವಿಲೇವಾರಿ ಏಕೆ ಮಾಡಿಲ್ಲ, ಏನು ಸಮಸ್ಯೆ ಎಂದು ಅಧಿಕಾರಿಗಳನ್ನು ಪ್ರಶ್ನಿಸಿದ ಅವರು ಮುಂದೆ ಇದು ಮರುಕಳಿಸದಂತೆ ಸೂಕ್ತ ಗಮನ ಹರಿಸಿ ಎಂದು ಸೂಚಿಸಿದರು.

# ಪಿಎಲ್‌ಡಿ ಬ್ಯಾಂಕ್ : ಜೆಡಿಎಸ್ ಬೆಂಬಲಿತರ ಗೆಲುವು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಸೀಕೆರೆ: ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ (ಪಿಎಲ್‌ಡಿ) ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಶಶಿವಾಳ ಗಂಗಾಧರ್ ಅಧ್ಯಕ್ಷರಾಗಿ ಹಾಗೂ ಉಪಾಧ್ಯಕ್ಷರಾಗಿ ಬೇವಿನಹಳ್ಳಿ ಯೋಗೀಶ್ ಗುರುವಾರ ಅವಿರೋಧ ಆಯ್ಕೆಯಾದರು.

15 ಸದಸ್ಯ ಬಲದ ಬ್ಯಾಂಕ್‌ನ ನಿರ್ದೇಶಕರ ಪೈಕಿ ಗಂಗಾಧರ್ ಹಾಗು ಯೋಗೀಶ್ ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಹಿನ್ನಲೆಯಲ್ಲಿ ಚುನಾವಣಾಧಿಕಾರಿ ದೇವರಾಜ್ ಅವಿರೋಧ ಆಯ್ಕೆ ಪ್ರಕಟಿಸಿದರು.

ನೂತನ ಅಧ್ಯಕ್ಷ ಶಶಿವಾಳ ಗಂಗಾಧರ್ ಮಾತನಾಡಿ, ಮೂರನೇ ಬಾರಿಗೆ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷನಾಗಿ ಆಯ್ಕೆಯಾಗಲು ನಿರ್ದೇಶಕರು ಬೆಂಬಲ ನೀಡಿದ್ದಾರೆ. ಜೆಡಿಎಸ್ ಮುಖಂಡ ಎನ್.ಆರ್. ಸಂತೋಷ್ ಎಲ್ಲರನ್ನೂ ಒಗ್ಗೂಡಿಸಿ ಅಧಿಕಾರ ಹಿಡಿಯಲು ಅನುವು ಮಾಡಿಕೊಟ್ಟಿದ್ದಾರೆ. ದೊರೆತಿರುವ ಅವಕಾಶ ಸದ್ಬಳಕೆ ಮಾಡಿಕೊಂಡು ರೈತರ ಹಿತಕಾಯಲು ಶ್ರಮಿಸುತ್ತೇನೆ ಎಂದರು.




ಜೆಡಿಎಸ್ ಮುಖಂಡ ಎನ್. ಆರ್. ಸಂತೋಷ್ ಮಾತನಾಡಿ, ಗ್ರಾಮೀಣ ಜನರ ಶ್ರೇಯೋಭಿವೃದ್ಧಿ ಬ್ಯಾಂಕ್‌ನ ಆದ್ಯತೆಯಾಗಬೇಕು. ರೈತರ ಹಿತ ಅರಿತು ಕೆಲಸ ಮಾಡಿದರೆ ಆಯ್ಕೆ ಸಾರ್ಥಕವಾಗುತ್ತದೆ. ಈ ನಿಟ್ಟಿನಲ್ಲಿ ನೂತನ ಅಧ್ಯಕ್ಷ , ಉಪಾಧ್ಯಕ್ಷರು ಕೆಲಸ ಮಾಡಬೇಕು. ಹೈನುಗಾರಿಕೆ, ಜಮೀನು ಅಭಿವೃದ್ಧಿ, ಕೃಷಿ ಪರಿಕರ ಖರೀದಿಗೆ ನೆರವು ಸೇರಿ ಎಲ್ಲಾ ಬಗೆಯ ಸಾಲ ಸೌಲಭ್ಯಗಳನ್ನು ಪಕ್ಷಾತೀತವಾಗಿ ಒದಗಿಸಬೇಕು ಎಂದು ಸಲಹೆ ನೀಡಿದರು.

ನಿರ್ದೇಶಕರಾದ ಯಳವಾರೆ ಸಿದ್ದೇಶ್, ಟಿ.ಎಂ. ಪರಮೇಶ್ವರಪ್ಪ, ಭೋಜಾನಾಯ್ಕ್, ಸಿದ್ದೇಗೌಡ, ದೇವರಾಜ್ ಸೇರಿ ಇತರರಿದ್ದರು. ಹಾಸನ ವೃತ್ತದಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಪುತ್ಥಳಿಗೆ ಮುಖಂಡರು ಹಾರ ಹಾಕಿ ನಮಿಸಿದರು.

# ಬೆಳಮೆ ಕುಬೇರಪ್ಪ ನಿಧನ



ಹಾಸನ: ವೀರಶೈವ ಲಿಂಗಾಯತ ಸಮಾಜದ ಮುಖಂಡ ಹಾಗೂ ಕಾಫಿ ಬೆಳೆಗಾರ ಬೆಳಮೆ ಕುಬೇರಪ್ಪ (64) ಅನಾರೋಗ್ಯದಿಂದ ಗುರುವಾರ ಬೆಂಗಳೂರಿನ ಆಸ್ಪತ್ರೆಯಲ್ಲಿ ನಿಧನರಾದರು. ಮೃತರಿಗೆ ಪತ್ನಿ ಹಾಗು ಇಬ್ಬರು ಪುತ್ರರಿದ್ದಾರೆ. ಶುಕ್ರವಾರ ಬೆಳಿಗ್ಗೆ 9 ಗಂಟೆಗೆ ರವೀಂದ್ರ ನಗರದ ಅವರ ನಿವಾಸದ ಎದುರು ಪಾರ್ಥಿವ ಶರೀರ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ನಂತರ ಬೆಳಮೆ ತೋಟದಲ್ಲಿ ಅಂತ್ಯಕ್ರಿಯೆ ನೆರವೇರಿತು.

# ಮಕ್ಕಳ ಮನೋ ವಿಕಸನಕ್ಕೆ ಬೇಸಿಗೆ ಶಿಬಿರ ಸಹಕಾರಿ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹೊಳೆನರಸೀಪುರ: ಮಕ್ಕಳ ಮನೋ ವಿಕಸನಕ್ಕೆ ಬೇಸಿಗೆ ಶಿಬಿರಗಳು ಸಹಕಾರಿಯಾಗುತ್ತದೆ ಎಂದು ಪುರಸಭಾ ಅಧ್ಯಕ್ಷ ಎಚ್.ಕೆ. ಪ್ರಸನ್ನ ತಿಳಿಸಿದರು.

ಪಟ್ಟಣದ ಸೋಷಿಯಲ್ ಕ್ಲಬ್ ಸೇವಾ ಸದನದಲ್ಲಿ ಸ್ಕೌಟ್ಸ್ ಅಂಡ್ ಗೈಡ್ಸ್ ಸ್ಥಳೀಯ ಸಮಿತಿ ಆಯೋಜಿಸಿದ್ದ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳ 5 ದಿನದ ಬೇಸಿಗೆ ಉಚಿತ ಶಿಬಿರ ಉದ್ಘಾಟಿಸಿ ಮಾತನಾಡಿದರು.

ಇಂದಿನ ಶೈಕ್ಷಣಿಕ ವ್ಯವಸ್ಥೆಯಲ್ಲಿ ಪಠ್ಯೇತರ ಚಟುವಟಿಕೆಗಳು ಅತಿ ಅಪ್ಯಾಯಮಾನ.

ಶಿಬಿರದ ಮೂಲಕ ಮಕ್ಕಳು ಬೆರೆತು, ಆಡಿ ಕಲಿಯುವ, ಅರಿತು ನಲಿಯುವುದರಿಂದ ಮನಸ್ಸಿನ ವಿಕಸನವಾಗುತ್ತದೆ. ಶಿಬಿರದ ಕಾರ್ಯ ಚಟುವಟಿಕೆಗಳು ಸ್ಪರ್ಧಾತ್ಮಕ ಭಾವನೆಗಳನ್ನು ಹುಟ್ಟು ಹಾಕುವುದಲ್ಲದೆ ಜ್ಞಾನ ವೃದ್ಧಿಗೆ ಸಹಕಾರಿಯಾಗುತ್ತದೆ ಎಂದರು.

ಸ್ಕೌಟ್ಸ್ ಅಂಡ್ ಗೈಡ್ಸ್‌ನ ಕುಮುದಾ ಮಾತನಾಡಿ, ಸಾಮಾಜಿಕ ಕಾರ್ಯಗಳು ಮನಸ್ಸಿಗೆ ಮುದ ನೀಡುತ್ತದೆ.

ಅದರಲ್ಲೂ ಮಕ್ಕಳ ಮನೋಧರ್ಮದ ವಿಕಸನಕ್ಕೆ ಸಾಕ್ಷಿಯಾಗುವ ಕಾರ್ಯಕ್ರಮಗಳು ಗುಣಾತ್ಮಕತೆಯನ್ನು ಬೀರುತ್ತದೆ ಎಂದರು.

ಸ್ಕೌಟ್ಸ್‌ನ ಸ್ಥಳೀಯ ಸಮಿತಿ ಅಧ್ಯಕ್ಷ ಶಂಕರ್‌ನಾರಾಯಣ್ ಐತಾಳ್, ಉಪಾಧ್ಯಕ್ಷ ಮುರುಳಿಧರ್ ಗುಪ್ತ, ವರ್ತಕ ನಾಗೇಂದ್ರ ಶೆಟ್ಟಿ, ಕೆನರಾ ಬ್ಯಾಂಕ್ ನಿವೃತ್ತ ವ್ಯವಸ್ಥಾಪಕ ಉದಯಬಾನು ಉಪಸ್ಥಿತರಿದ್ದರು.

# 2 ಕೆ.ಜಿ ಗಾಂಜಾ ವಶ

ಹಾಸನ: ಗಾಂಜಾ ಸಾಗಣೆ ಮಾಡುತ್ತಿದ್ದ ಆರೋಪಿಯನ್ನು ನಗರದ ಪೆನ್‌ಷನ್ ಮೊಹಲ್ಲಾ ಠಾಣೆ ಪೊಲೀಸರು ಬಂಧಿಸಿ, 2 ಕೆ.ಜಿ 700 ಗ್ರಾಂ ಗಾಂಜಾ, ಕಾರನ್ನು ವಶಪಡಿಸಿಕೊಂಡಿದ್ದಾರೆ. ವಲ್ಲಭಾಯಿ ರಸ್ತೆಯ ಇಮ್ರಾನ್ ಬಂಧಿತ ಆರೋಪಿ.

ಬುಧವಾರ ಮಧ್ಯರಾತ್ರಿ 1 ಸಮಯದಲ್ಲಿ ಪಿಎಸ್‌ಐ ರವಿಶಂಕರ್ ಅವರು ಸಬೇದಾರ್ ವೃತ್ತದಲ್ಲಿರುವ ಚೆಕ್‌ಪೋಸ್ಟ್ ಬಳಿ ತೆರಳಿ ವಾಹನ ತಪಾಸಣೆ ಮಾಡುತ್ತಿದ್ದರು. ಈ ವೇಳೆ ಹಾಸನದ ಡೇರಿ ವೃತ್ತದ ಕಡೆಯಿಂದ ರಿಂಗ್ ರಸ್ತೆಯಲ್ಲಿ ಬಂದ ಕಾರನ್ನು ತಡೆದರು. ಚಾಲಕ ಸಮವಸ್ತ್ರದಲ್ಲಿದ್ದರೂ, ಪೊಲೀಸರನ್ನು ನೋಡಿ ಅನುಮಾನಾಸ್ಪದವಾಗಿ ನಡೆದುಕೊಂಡ ಹಿನ್ನಲೆ ಕೆಎ-03-ಎಂಕ್ಯೂ-7066ರ ಸಂಖ್ಯೆಯ ಮಾರುತಿ ಸುಜಿಕಿ ಸ್ವಿಫ್ಟ್ ಕಾರು ಹಾಗು ಚಾಲಕನನ್ನು ವಶಕ್ಕೆ ಪಡೆದು, ತಪಾಸಣೆ ನಡೆಸಿದಾಗ ಕಾರಿನ ಡಿಕ್ಕಿಯಲ್ಲಿದ್ದ ಪೊಟ್ಟಣವನ್ನು ಪರಿಶೀಲಿಸಿದಾಗ ಅದರಲ್ಲಿ ಸುಮಾರು 2 ಕೆ.ಜಿ 700 ಗ್ರಾಂ. ತೂಕದ ಅಂದಾಜು 2 ಲಕ್ಷದ 7 ಸಾವಿರ ಬೆಲೆ ಬಾಳುವ ಒಣಗಿದ ಗಾಂಜಾ ಸೊಪ್ಪು ಇರುವುದು ಪತ್ತೆಯಾಗಿದೆ. ಈ ಸಂಬಂಧ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿದ್ದು, ವಿಚಾರಣೆ ವೇಳೆ ಬೇರೆಡೆಯಿಂದ ಮಾದಕ ವಸ್ತು ತಂದು ಇಲ್ಲಿ ಮಾರಾಟ ಮಾಡಲು ಆರೋಪಿ ಯತ್ನಿಸುತ್ತಿದ್ದ ಎಂದು ತಿಳಿದು ಬಂದಿದೆ.

# ಕಳ್ಳೇರಿ ಅಂಗನವಾಡಿಗೆ ಗಾಡ್ರೇಜ್ ವಿತರಣೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ತಾಲ್ಲೂಕಿನ ಕಳ್ಳೇರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅಂಗನವಾಡಿ ಕೇಂದ್ರಗಳಿಗೆ ಗಾಡ್ರೇಜ್ ಬೀರುಗಳನ್ನು ಅಧ್ಯಕ್ಷ ಅಬ್ದುಲ್ ಹಕೀಂ ನೇತೃತ್ವದಲ್ಲಿ ವಿತರಿಸಲಾಯಿತು.

ಕಳ್ಳೇರಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಅಬ್ದುಲ್ ಹಕೀಂ ಮಾತನಾಡಿ, ನಮ್ಮ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ 8 ಅಂಗನವಾಡಿ ಕೇಂದ್ರಗಳಿಗೆ ಪಂಚಾಯಿತಿ ಅನುದಾನದಲ್ಲಿ ಉಚಿತವಾಗಿ ಗಾಡ್ರೇಜ್ ಬಿರುಗಳನ್ನು ವಿತರಿಸಲಾಗಿದೆ. ಅಂಗನವಾಡಿ ವಸ್ತುಗಳನ್ನು ಇಡಲು ಕೇಂದ್ರದಲ್ಲಿ ಸರಿಯಾದ ಸ್ಥಳವಿರಲಿಲ್ಲ. ಎಲ್ಲೆಂದರಲ್ಲಿ ಹಾಕುವುದರಿಂದ ನೋಡಲು ಸಹ ಚೆನ್ನಾಗಿ ಕಾಣುತ್ತಿರಲಿಲ್ಲ. ಇದೆಲ್ಲವನ್ನು ಗಮನದಲ್ಲಿ ಇಟ್ಟುಕೊಂಡು ನಮ್ಮ ಪಂಚಾಯಿತಿ ಸದಸ್ಯರೊಂದಿಗೆ ಚರ್ಚಿಸಿ ಅವರ ಸಹಕಾರದೊಂದಿಗೆ ಕಳ್ಳೇರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಎಲ್ಲ 8 ಅಂಗನವಾಡಿ ಕೇಂದ್ರಗಳಿಗೆ ಗುಣಮಟ್ಟದ ಗಾಡ್ರೇಜ್ ಬೀರು ವಿತರಿಸುತ್ತಿದ್ದೇವೆ ಎಂದರು.




ಸರ್ಕಾರದಿಂದ ಬರುವ ಸೌಲಭ್ಯಗಳನ್ನು ಸರಿಯಾಗಿ ಗರ್ಭಿಣಿಯರು ಮತ್ತು ಮಕ್ಕಳಿಗೆ ಕೊಡುವ ಮೂಲಕ ಅವರ ಮುಂದಿನ ಬೆಳವಣಿಗೆಗೆ ಮುಂದಾಗಬೇಕು. ಮುಂದಿನ ದಿನಗಳಲ್ಲಿ ಅವಶ್ಯವಿರುವ ವಸ್ತುಗಳನ್ನೂ ಸಹ ಕೊಡುವುದಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದರು.

ಕಳ್ಳೇರಿ ಗ್ರಾಮ ಪಂಚಾಯಿತಿ ಸದಸ್ಯರು, ಅಭಿವೃದ್ಧಿ ಅಧಿಕಾರಿ ಕುಮಾರ್, ಕಾರ್ಯದರ್ಶಿ ಜಯಶೀಲ, ಸಿಬ್ಬಂದಿ ಮತ್ತು ಅಂಗನವಾಡಿ ಕಾರ್ಯಕರ್ತೆಯರಿದ್ದರು.

# ಅಂಬೇಡ್ಕರ್ ಜಯಂತಿ ಯಶಸ್ಸಿಗೆ ಸೂಚನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಕಲಗೂಡು: ತಾಲ್ಲೂಕು ಆಡಳಿತ ವತಿಯಿಂದ ಏ. 14ರಂದು ಅದ್ಧೂರಿಯಾಗಿ ನಡೆಯುವ ಸಂವಿಧಾನ ಶಿಲ್ಪಿ ಡಾ. ಅಂಬೇಡ್ಕರ್ ಅವರ ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ಎಲ್ಲಾ ಪ್ರಗತಿ ಪರ ಸಂಘ ಸಂಸ್ಥೆಗಳ ಕಾರ್ಯಕರ್ತರು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಶಾಸಕ ಎ. ಮಂಜು ಮನವಿ ಮಾಡಿದರು.

ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಈ ಬಾರಿ ಯಾವುದೇ ಚುನಾವಣೆ ಇಲ್ಲದೆ ಇರುವುದರಿಂದ ಅರ್ಥಪೂರ್ಣವಾಗಿ ಅಂಬೇಡ್ಕರ್ ಜಯಂತಿ ಕಾರ್ಯಕ್ರಮವನ್ನು ಆಯೋಜನೆ ಮಾಡುವುದು ನಮ್ಮ ಭಾಗ್ಯವಾಗಿದೆ. ಪಟ್ಟಣ ಸೇರಿ ಇಡೀ ತಾಲ್ಲೂಕಿನಾದ್ಯಂತ ಜನರು ಸಂಭ್ರಮದಿಂದ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಂವಿಧಾನ ಶಿಲ್ಪಿಗೆ ಗೌರವ ತಂದುಕೊಡಬೇಕೆಂದು ಕರೆ ನೀಡಿದರು.



ತಾಲ್ಲೂಕು ಕಚೇರಿ ಆವರಣದ ಅಂಬೇಡ್ಕರ್ ಪ್ರತಿಮೆಯ ಗೋಪುರ ಕಾರ್ಯಕ್ರಮ ಈಗಾಗಲೇ ಪೂರ್ಣಗೊಳ್ಳಬೇಕಿತ್ತು. ಕೆಲಸ ನಿರ್ವಹಿಸುವ ತಂಡ ಸುಳ್ಳು ನೆಪಹೇಳಿ ಬೇರೆ ಕಡೆ ತೆರಳಿರುವ ಪರಿಣಾಮ ಅಂದುಕೊಂಡ ವೇಳೆಗೆ ಗೋಪುರ ಕೆಲಸ ಮುಗಿಸಿಲ್ಲ. ಈ ಬಾರಿಯ ಅಂಬೇಡ್ಕರ್ ಜಯಂತಿ ಕಾರ್ಯಕ್ರಮವನ್ನು ಗೋಪುರ ಸಮರ್ಪಣೆ ಮಾಡುವ ಮೂಲಕ ಐತಿಹಾಸಿಕ ಕಾರ್ಯಕ್ರಮ ಆಯೋಜನೆ ಮಾಡುವ ಉದ್ದೇಶವನ್ನು ಹೊಂದಲಾಗಿತ್ತು. ಕೆಲಸಗಾರರಿಂದ ಅದು ಸಾಧ್ಯವಾಗಿಲ್ಲ. ಏ. 14ರ ಜಯಂತಿ ಕಾರ್ಯಕ್ರಮ ಮುಗಿದ ನಂತರ ಗೋಪುರ ಉದ್ಘಾಟನೆ ವೈಭವದಿಂದ ನಡೆಯಲಿದೆ ಎಂದು ಹೇಳಿದರು.

ಪಟ್ಟಣದ ಶಿಕ್ಷಕರ ಭವನದಲ್ಲಿ ಜಯಂತಿ ಆಚರಣೆ ನಡೆಯಲಿದೆ. ಪಟ್ಟಣ ಪಂಚಾಯಿತಿ ಎಲ್ಲಾ ಸದಸ್ಯರು, ಎಲ್ಲಾ ಗ್ರಾಪಂಗಳ ಸದಸ್ಯರು, ಅಧಿಕಾರಿ, ಸಿಬ್ಬಂದಿ ಹಾಗೂ ಎಲ್ಲಾ ಇಲಾಖೆಗಳ ಅಧಿಕಾರಿ, ಸಿಬ್ಬಂದಿ ಕಡ್ಡಾಯವಾಗಿ ಹಾಜರಿರಬೇಕು. ಯಾರು ಗೈರಾಗುತ್ತಾರೋ ಅಂತವರ ವಿರುದ್ಧ ಕ್ರಮ ಜರುಗಿಸಲಾಗುವುದು. ಈಗಾಗಲೇ ಎಲ್ಲರಿಗೂ ಮಾಹಿತಿ ನೀಡುವಂತೆ ತಹಸೀಲ್ದಾರ್, ಇಒ ಮತ್ತು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಇಡೀ ದೇಶಕ್ಕೆ ಸಂವಿಧಾನ ನೀಡಿ ಪ್ರಜಾಪ್ರಭುತ್ವದ ಆಶಯಗಳನ್ನು ಪ್ರತಿಯೊಬ್ಬರಿಗೂ ಕಲ್ಪಿಸಿರುವ ಅಂಬೇಡ್ಕರ್ ಅವರನ್ನು ಒಂದು ಸಮುದಾಯಕ್ಕೆ ಸೀಮಿತಗೊಳಿಸಬಾರದು. ಎಲ್ಲಾ ಸಮಾಜದವರು, ಅಭಿಮಾನಿಗಳು, ವಿದ್ಯಾರ್ಥಿಗಳು, ಮಹಿಳಾ ಮಕ್ಕಳ ಕಲ್ಯಾಣ ಇಲಾಖೆಯ ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು, ಆಶಾ ಕಾರ್ಯಕರ್ತೆಯರು, ಮಹಿಳಾ ಸ್ವಸಹಾಯ ಸಂಘದ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಿದೆ. ಈ ಬಗ್ಗೆ ಆಯಾ ಇಲಾಖೆ ಅಧಿಕಾರಿಗಳು ನೋಡಿಕೊಳ್ಳಬೇಕೆಂದು ಮಂಜು ಅವರು ತಿಳಿಸಿದರು.

ತಹಸೀಲ್ದಾರ್ ಸೌಮ್ಯ ಅವರು ಮಾತನಾಡಿ, ಏ. 14ರಂದು ಬೆಳಿಗ್ಗೆ ತಾಲ್ಲೂಕು ಕಚೇರಿ ಆವರಣದಲ್ಲಿನ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ಬಳಿಕ ಬೆಳ್ಳಿರಥದ ಸಾರೋಟಿನಲ್ಲಿ ಅಂಬೇಡ್ಕರ್ ಅವರ ಭಾವಚಿತ್ರ ಮೆರವಣಿಗೆ ವಿವಿಧ ಕಲಾತಂಡಗಳು, ಅಧಿಕಾರಿಗಳೊಂದಿಗೆ ನಡೆಯಲಿದೆ. ಅದಾದ ಬಳಿಕ ಶಿಕ್ಷಕರ ಭವನದಲ್ಲಿ ವೇದಿಕೆ ಕಾರ್ಯಕ್ರಮ ಆಯೋಜನೆ ಮಾಡಲಾಗಿದೆ. ಅವತ್ತಿನ ಕಾರ್ಯಕ್ರಮದಲ್ಲಿ ಭಾಗವಹಿಸುವ ಎಲ್ಲರಿಗೂ ಉಪಾಹಾರದ ವ್ಯವಸ್ಥೆಯನ್ನು ಮಾಡಿಕೊಳ್ಳಲಾಗಿದೆ.

ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ದಲಿತ ಸಮುದಾಯದ ಗಣ್ಯರಿಗೆ ಹಾಗೂ ಶೈಕ್ಷಣಿಕ ಕ್ಷೇತ್ರದಲ್ಲಿ ಅತೀ ಹೆಚ್ಚಿನ ಅಂಕಗಳಿಸಿರುವ ವಿದ್ಯಾರ್ಥಿಗಳನ್ನು ಗೌರವಿಸಲಾಗುವುದು.ವಿಶೇಷಭಾಷಣದ ವ್ಯವಸ್ಥೆಯನ್ನು ಸಂಪನ್ಮೂಲ ವ್ಯಕ್ತಿಯಿಂದ ನಡೆಯಲಿದೆ ಎಂದು ಹೇಳಿದರು.

ಸಭೆಯಲ್ಲಿ ದಲಿತ ಪರ ಸಂಘಟನೆಗಳ ಮುಖಂಡರು ಕಾರ್ಯಕ್ರಮ ಆಯೋಜನೆ ಕುರಿತು ಕೆಲವು ಸಲಹೆಗಳನ್ನು ನೀಡಿದರು.

ಪಪಂ ಅಧ್ಯಕ್ಷ ಪ್ರದೀಪ್ ಕುಮಾರ್, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ರವಿಕುಮಾರ್ ಇತರರಿದ್ದರು.

# ಕರ್ತವ್ಯವೇ ಸ್ಕೌಟ್ಸ್-ಗೈಡ್ಸ್‌ನ ಮೂಲ ಧ್ಯೇಯ

## ಬೈರಾಪುರದ ಎಸ್.ವಿ. ಪಬ್ಲಿಕ್ ಶಾಲೆಯಲ್ಲಿ ತರಬೇತಿ | 40 ಶಿಬಿರಾರ್ಥಿಗಳು ಭಾಗಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಆಲೂರು: ದೇವರಿಗೆ ಕರ್ತವ್ಯ, ಇತರರಿಗೆ ಕರ್ತವ್ಯ ಮತ್ತು ಸ್ವಯಂ ಕರ್ತವ್ಯ ಎಂಬ ಮೂರು ಮೂಲಭೂತ ತತ್ತ್ವಗಳ ಆಧಾರದ ಮೇಲೆ ಸ್ಕೌಟ್ಸ್ ಅಂಡ್ ಗೈಡ್ಸ್ ಚಳವಳಿ ಸಾಗಿ ಬರುತ್ತಿದೆ ಎಂದು ಹಿರಿಯ ಗೈಡರ್ ಎಚ್.ಜಿ. ಕಾಂಚನಮಾಲ ಹೇಳಿದರು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಹಾಗೂ ತಾಲ್ಲೂಕು ಸಂಸ್ಥೆ ವತಿಯಿಂದ ಬೈರಾಪುರದ ಎಸ್.ವಿ. ಪಬ್ಲಿಕ್ ಶಾಲೆಯಲ್ಲಿ ನೂತನ ಸ್ಕೌಟ್ಸ್ ಮತ್ತು ಗೈಡ್ಸ್ ಶಿಬಿರಾರ್ಥಿಗಳಿಗೆ ಹಮ್ಮಿಕೊಂಡಿದ್ದ ಏಳು ದಿನಗಳ ತರಬೇತಿ ಶಿಬಿರದಲ್ಲಿ ಮಾತನಾಡಿ, ಆಧ್ಯಾತ್ಮಿಕ, ಸಾಮಾಜಿಕ ಮತ್ತು ವೈಯಕ್ತಿಕ ಆಯಾಮಗಳಿಗೆ ಸಂಬಧಿಸಿದ ತತ್ವಗಳು ಸ್ಕೌಟಿಂಗ್ ಆಧಾರಿತ ಮೂಲಭೂತ ಕಾನೂನುಗಳು ಮತ್ತು ನಂಬಿಕೆಗಳನ್ನು ರೂಪಿಸುತ್ತದೆ. ಸಂಸ್ಥಾಪಕರಾದ ಲಾರ್ಡ್ ಬೇಡನ್ ಪೊವೆಲ್ ಕಲ್ಪಿಸಿಕೊಂಡ ಮೂಲ ಭರವಸೆ ಮತ್ತು ಕಾನೂನು ಸ್ಫೂರ್ತಿಯ ಉಪಯುಕ್ತ ಮೂಲವಾಗಿದೆ. ಏಕೆಂದರೆ ಅದು ಚಳವಳಿಯ ಮೂಲಭೂತ ಅಂಶಗಳನ್ನು ಒಳಗೊಂಡಿದೆ. ಇಲ್ಲಿ ವೈವಿಧ್ಯಮಯ ಚಟುವಟಿಕೆಗಳು, ಆಟಗಳು, ಉಪಯುಕ್ತ ಕೌಶಲಗಳು ಮತ್ತು ಸಮುದಾಯಕ್ಕೆ ಸೇವೆಗಳ ಸಮತೋಲಿತ ಸಂಯೋಜನೆಯಲ್ಲಿ ಕಾರ್ಯಕ್ರಮ ವಿನ್ಯಾಸಗೊಳಿಸಲಾಗಿದೆ. ಸ್ಕೌಟಿಂಗ್, ಗೈಡಿಂಗ್ ಆರಂಭವಾದಾಗಿನಿದ ಪ್ರಕೃತಿ ಮತ್ತು ಹೊರಾಂಗಣ ಜೀವನವನ್ನು ಇಲ್ಲಿನ ಚಟುವಟಿಕೆಗೆ ಆದರ್ಶ ಎಂದು ಪರಿಗಣಿಸಲಾಗಿದೆ.

ಬೌದ್ಧಿಕ ಬೆಳವಣಿಗೆಯ ದೃಷ್ಟಿಕೋನದಿಂದ ಪ್ರಕೃತಿಯು ಪ್ರಸ್ತುತಪಡಿಸುವ ಹಲವಾರು ಸವಾಲುಗಳು ಯುವ ಜನರ ಸೃಜನಶೀಲ ಸಾಮರ್ಥ್ಯಗಳನ್ನು ಉತ್ತೇಜಿಸುತ್ತವೆ ಎಂದರು.

ಜಿಲ್ಲಾ ಸಂಘಟನಾ ಕಾರ್ಯದರ್ಶಿ ಸೋಫಿಯಾ ಫರ್ನಾಂಡೀಸ್ ಮಾತನಾಡಿ, ಸ್ಕೌಟ್ಸ್ ಅಂಡ್ ಗೈಡ್ಸ್ ಚಳವಳಿ ಹುಟ್ಟಿರುವುದೇ ಜೀವನ ಮೌಲ್ಯಗಳನ್ನು ಬಿತ್ತಿ ಬದುಕನ್ನು ಉದಾತ್ತವಾಗಿಸುವುದಕ್ಕಾಗಿ, ಸ್ಕೌಟ್ಸ್ ಅಥವಾ ಗೈಡ್ಸ್ ಎಂದರೆ ನಂಬಿಕೆಗೆ ಅರ್ಹವಾಗಿರುವುದು. ತಾನು ಭರವಸೆ ನೀಡಿದ್ದನ್ನು ಸಾಧ್ಯವಾದಷ್ಟು ಸಾಧಿಸಲು ಪ್ರಯತ್ನಿಸುತ್ತಾನೆ. ತನ್ನ ನಾಯಕ, ದೇಶಕ್ಕೆ ನಿಷ್ಠನಾಗಿರುವುದು. ಇತರರಿಗೆ ಸಹಾಯ ಮಾಡುವುದು, ಸಮಾಜದ ಇತರೆ ಸಂಗಡಿಗರಿಗೆ ಸಹೋದರ-ಸಹೋದರಿಯ ಸ್ಥಾನಮಾನ ನೀಡಿ ಸಾಮಾಜಿಕ ವರ್ಗದ ವ್ಯತ್ಯಾಸಗಳನ್ನು ಲೆಕ್ಕಿಸದೇ ಸಹಾಯ ಮಾಡುತ್ತಾರೆ. ವಿನಯಶೀಲ ಗುಣವನ್ನು ಹೊಂದಿ ಎಲ್ಲರಿಗೂ ವಿಶೇಷವಾಗಿ ಮಹಿಳೆಯರು, ಮಕ್ಕಳು ಮತ್ತು ವೃದ್ಧರಿಗೆ ಸಭ್ಯ ಮತ್ತು ಸಹಾಯಕವಾಗಿರುವುದು.




ಪ್ರಾಣಿ ಸ್ನೇಹಿತನಾಗಿ ಅವುಗಳನ್ನು ನೋಯಿಸುವುದಿಲ್ಲ ಅಗತ್ಯವಿಲ್ಲದೇ ಕೊಲ್ಲುವುದಿಲ್ಲ. ಮಿತವ್ಯಯಿಯಾಗಿರುವುದರ ಜೊತೆಗೆ ಅನಗತ್ಯವಾಗಿ ಹಣ ಖರ್ಚು ಮಾಡುವುದನ್ನು ತಪ್ಪಿಸುತ್ತಾನೆ. ಆಲೋಚನೆ, ಮಾತು ಹಾಗೂ ಕಾರ್ಯದಲ್ಲಿ ಶುದ್ಧನಾಗಿರುತ್ತಾನೆ ಎಂದರು.

ಹಿರಿಯ ಸ್ಕೌಟ್ ಮಾಸ್ಟರ್ ಕೆ.ಎಂ. ಸತೀಶ್ ಮಾತನಾಡಿ, ಸ್ಕೌಟಿಂಗ್ ಸಮವಸ್ತ್ರ ಒಂದು ದೇಶದಲ್ಲಿನ ಸಾಮಾಜಿಕ ಸ್ಥಾನಮಾನದ ಎಲ್ಲಾ ವ್ಯತ್ಯಾಸಗಳನ್ನು ಮರೆಮಾಡುತ್ತದೆ. ಸಮಾನತೆಯನ್ನು ಸೃಷ್ಟಿಸುತ್ತದೆ. ಆದರೆ ಇನ್ನೂ ಮುಖ್ಯವಾಗಿ ಇದು ದೇಶ, ಜನಾಂಗ ಮತ್ತು ಧರ್ಮದ ವ್ಯತ್ಯಾಸಗಳನ್ನು ಒಳಗೊಳ್ಳುತ್ತದೆ. ಎಲ್ಲರೂ ಒಂದೇ ಮಹಾನ್ ಸಹೋದರತ್ವದ ಸದಸ್ಯರು ಎಂದು ಭಾವಿಸುವಂತೆ ಮಾಡುತ್ತದೆ. ಸ್ಕೌಟಿಂಗ್ ಮತ್ತು ಮಾರ್ಗದರ್ಶಿ ಚಳವಳಿಗಳನ್ನು ಸಾಮಾನ್ಯವಾಗಿ ವಯಸ್ಸು ಮತ್ತು ಶಾಲಾ ದರ್ಜೆಯ ಆಧಾರದ ಮೇಲೆ ವಿಭಾಗಗಳಾಗಿ ವಿಂಗಡಿಸಲಾಗಿದೆ. ಇದು ಗುಂಪಿನ ಸದಸ್ಯರ ಪ್ರಬುದ್ಧತೆಗೆ ಅನುಗುಣವಾಗಿ ಚಟವಟಿಕೆಗಳನ್ನು ರೂಪಿಸಲು ಅನುವು ಮಾಡಿಕೊಡುತ್ತದೆ. ಈ ವಯಸ್ಸಿನ ವಿಭಾಗಗಳು ಸ್ಥಳೀಯ ಸಂಸ್ಕೃತಿ ಮತ್ತು ಪರಿಸರಕ್ಕೆ ಹೊಂದಿಕೊಳ್ಳುವಂತೆ ಕಾಲಾನಂತರದಲ್ಲಿ ಬದಲಾಗಿದೆ. 6-10 ವಯಸ್ಸಿನ ಗಂಡು ಮಕ್ಕಳಿಗೆ ಕಬ್ಸ್ ಎಂತಲೂ, ಹೆಣ್ಣು ಮಕ್ಕಳಿಗೆ ಬುಲ್ ಬುಲ್ಸ್ ಎಂದು ಕರೆಯಲಾಗುತ್ತದೆ.

11-17 ವರ್ಷ ವಯೋಮಿತಿಯ ಗಂಡು ಮಕ್ಕಳಿಗೆ ಸ್ಕೌಟ್ಸ್ ಎಂಥಲೂ ಹೆಣ್ಣು ಮಕ್ಕಳಿಗೆ ಗೈಡ್ಸ್ ಎಂದು ಕರೆಯಲಾಗುತ್ತದೆ. 18-25 ವರ್ಷ ವಯೋಮಿತಿಯ ಗಂಡು ಮಕ್ಕಳಿಗೆ ರೋರ್ಸ್ ಎಂಥಲೂ ಹೆಣ್ಣು ಮಕ್ಕಳಿಗೆ ರೇಂರ್ಸ್ ಎಂದು ಕರೆಯಲಾಗುತ್ತದೆ ಎಂದರು.

# ಏ. 10-11 ರಂದು ಚನ್ನಕೇಶವ ಸ್ವಾಮಿ ರಥೋತ್ಸವ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ಚನ್ನಕೇಶವಸ್ವಾಮಿ ದಿವ್ಯ ಬ್ರಹ್ಮ ರಥೋತ್ಸವ ಮತ್ತು ನಾಡರಥೋತ್ಸವ ಏ. 10 ಮತ್ತು 11 ರಂದು ನಡೆಯಲಿದ್ದು ವಾಡಿಕೆಯಂತೆ ವಿವಿಧ ಉತ್ಸವವಾದಿಗಳು ಆರಂಭವಾಗಿವೆ.

ದೇವರಿಗೆ ದಿವ್ಯ ಶಾರದಾಲಂಕಾರೋತ್ಸ ಭಕ್ತಿ ಭಾವದಿಂದ ನಡೆಸಲಾಯಿತು. ಮೊದಲ ದಿನದ ಉತ್ಸವದಲ್ಲಿ ಜಿಲ್ಲಾಧಿಕಾರಿ ಸಿ. ಸತ್ಯಭಾಮ, ಪುರಸಭಾ ಅಧ್ಯಕ್ಷ ಎ.ಆರ್. ಅಶೋಕ್, ಆಡಳಿತಾಧಿಕಾರಿ ಶಾಂತಲಾ, ತಹಶೀಲ್ದಾರ್ ಎಂ. ಮಮತ ಹಾಗೂ ದೇಗುಲದ ಇಒ ಯೋಗೀಶ್ ಭಾಗವಹಿಸಿದ್ದರು.

ಜಗತ್ತಿನ ಶಿಲ್ಪಕಲಾ ರಸಿಕರನ್ನು ತನ್ನೆಡೆಗೆ ಸೆಳೆಯುವ ಬೇಲೂರು ಚನ್ನಕೇಶವಸ್ವಾಮಿ ದೇಗುಲಕ್ಕೆ ದೇಶ-ವಿದೇಶದಿಂದ ಪ್ರವಾಸಿಗರು ಬರುತ್ತಾರೆ. ದಕ್ಷಿಣ ಭಾರತದಲ್ಲಿಯೇ ಬೇಲೂರಿನಲ್ಲಿ ನಡೆಯುವ ಬ್ರಹ್ಮರಥೋತ್ಸವ ಮತ್ತು ನಾಡರಥೋತ್ಸವ ಪ್ರಾಮುಖ್ಯತೆ ಪಡೆದಿದೆ. ರಥೋತ್ಸವ ಒಂದು ಜಾತಿ, ಧರ್ಮಕ್ಕೆ ಸೀಮಿತವಾಗದೆ ಸರ್ವರನ್ನು ಅಪ್ಪಿಕೊಂಡು ಭಕ್ತಿಯ ಸುಧೆ ಹರಿಯುವ ತಾಣ.

ಬೇಲೂರಿನಲ್ಲಿ ಪ್ರತಿವರ್ಷ ನಡೆಯುವ ಜಾತ್ರಾ ಮಹೋತ್ಸವ ವೈಶಿಷ್ಟ್ಯಪೂರ್ಣವಾಗಿದೆ. ಯುಗಾದಿ ಹಬ್ಬದ ಮರುದಿನದಿಂದ ನಡೆಯುವ ಜಾತ್ರೆ ದಿವ್ಯ ಶಾರಾದಾಲಂಕೋತ್ಸವದಿಂದ ಹದಿನಾಲ್ಕನೇ ದಿನ ಶಯನೋತ್ಸವಕ್ಕೆ ಅಂತಿಮಗೊಳ್ಳುತ್ತದೆ.



ಬ್ರಹ್ಮ ರಥೋತ್ಸವಕ್ಕೆ ಮುನ್ನ ಶಾರಾದೋತ್ಸವ, ಕಲ್ಯಾಣೋತ್ಸವ, ಚಂದ್ರಮಂಡಲೋತ್ಸವ, ಅನಂತ ಪೀಠೋತ್ಸವ, ಹಂಸಾರೋಹಣೋತ್ಸವ, ಹನುಮಂತೋತ್ಸವ ಮತ್ತು ಜಾತ್ರೆಯ ಪ್ರಮುಖವಾದ ಗರುಡೋತ್ಸವ ನಡೆದ ಬಳಿಕ ಬ್ರಹ್ಮ ರಥೋತ್ಸವ ನಡೆಯುತ್ತದೆ.

ಈ ಬಗ್ಗೆ ಪತ್ರಿಕೆಯೊಂದಿಗೆ ಮಾತನಾಡಿದ ದೇಗುಲದ ಆಗಮಿಕ ನರಸಿಂಹ ಸ್ವಾಮಿ ಭಟ್ ಅವರು, ಚನ್ನಕೇಶವನ ರಥೋತ್ಸವ ಸಂಬಂಧ ಸ್ವಾಮಿಗೆ ಅಭಿಷೇಕ ಮತ್ತು ಚಿನ್ನಾಭರಣಗಳನ್ನು ಹಾಕಲಾಗುತ್ತದೆ.

ಬಳಿಕ ಅನುಜ್ಞೆ ಎಂದರೆ ಕೇಶವನಿಗೆ ಈ ಜಾತ್ರೆಗೆ ಅನುಮತಿ ನೀಡು ಮತ್ತು ಯಾವುದೇ ತೊಂದರೆ ಇಲ್ಲದೆ ಮಂಗಳಕರವಾಗಿ ಮುಕ್ತಾಯವಾಗಲಿ ಎಂದು ಪ್ರಾರ್ಥನೆ ನಡೆಸಲಾಗುತ್ತದೆ. ತದನಂತರ ಅಂಕುರಾರ್ಪಣೆಯೊಂದಿಗೆ ಪ್ರಾಂಗಣದಲ್ಲಿನ ತೋಟದ ಭೂಮಿಗೆ ಪೂಜೆ ಸಲ್ಲಿಸಿ ಸಂಪ್ರದಾಯದಂತೆ ಉತ್ಸವವಾದಿಗಳಿಗೆ ಚಾಲನೆ ನೀಡಲಾಗುತ್ತದೆ. ಅಂದು ಸಂಜೆ ನಡೆಯುವ ಮೊದಲ ದಿವ್ಯ ಶಾರದಾಲಂಕಾರೋತ್ಸವ ದೇಗುಲದ ಎಂಟು ಬೀದಿಯಲ್ಲಿ ಉತ್ಸವ ನಡೆಸಿ ಮಹಾಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿತರಿಸಲಾಗುತ್ತದೆ. ಬ್ರಹ್ಮ ರಥೋತ್ಸವ ತನಕ ಮತ್ತು ಅಂತಿಮ ಶಯನೋತ್ಸವ ತನಕ ವಿವಿಧ ಉತ್ಸವಗಳನ್ನು ನಡೆಸಿಕೊಂಡು ಬರಲಾಗುತ್ತಿದೆ.

ಈ ಬಾರಿ ನಾಡಿನಲ್ಲಿ ಸಮೃದ್ಧಿಯಿಂದ ಕೂಡಿದ ಮಳೆ-ಬೆಳೆಯಾಗಲಿ ಎಂದು ಪ್ರಾರ್ಥನೆ ನಡೆಸಲಾಗಿದೆ ಎಂದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248